# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



With Your support we reach
30,000+
HAMPI TIMES epaper readers
ನಿಮ್ಮ ನೆಚ್ಚಿನ ಗ್ರಾಹಕರಿಗೆ ನಿಮ್ಮ ಉತ್ಪನ್ನ ಹಾಗೂ ಸೇವೆಯ ಮಾಹಿತಿ ತಲುಪಿಸಲು ಸಂಪರ್ಕಿಸಿ
PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com





ಸಂಪುಟ:01 Volume:01 • ಸಂಚಿಕೆ:177 Issue:177 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 07.12.2023 07.12.2023 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2








ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

PLACE YOUR ADVT.
HOUSE RENT / SALE / LEASE, CHANGE OF NAME, OBITUARY, Public Notice & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com


## ಮೈಕ್ರೋ ನ್ಯೂಸ್

### ಡಿ.8 ಡೆಹ್ರಾಡೂನ್ ಗೆ ಪ್ರಧಾನಿ ಮೋದಿ ಭೇಟಿ

**ಹಂಪಿ ಟೈಮ್ಸ್ ಹೊಸಪೇಟೆ:**
ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಡಿ.8ರಂದು ಉತ್ತರಾಖಂಡದ ಡೆಹ್ರಾಡೂನ್ ಗೆ ಭೇಟಿ ನೀಡಲಿದ್ದಾರೆ. ಬೆಳಿಗ್ಗೆ 10:30 ಕ್ಕೆ ಡೆಹ್ರಾಡೂನಿನ ಅರಣ್ಯ ಸಂಶೋಧನಾ ಸಂಸ್ಥೆಯಲ್ಲಿ ನಡೆಯಲಿರುವ ಉತ್ತರಾಖಂಡ್ ಜಾಗತಿಕ ಹೂಡಿಕೆದಾರರ ಶೃಂಗಸಭೆ 2023ನ್ನು ಉದ್ಘಾಟಿಸಲಿದ್ದಾರೆ. 'ಉತ್ತರಾಖಂಡ್ ಜಾಗತಿಕ ಹೂಡಿಕೆದಾರರ ಶೃಂಗಸಭೆ 2023' ಉತ್ತರಾಖಂಡವನ್ನು ಹೊಸ ಹೂಡಿಕೆ ತಾಣವಾಗಿ ಬೆಳೆಸುವ ನಿಟ್ಟಿನಲ್ಲಿ ಒಂದು ಹೆಜ್ಜೆಯಾಗಿದೆ. ಎರಡು ದಿನಗಳ ಶೃಂಗಸಭೆ 2023 ರ ಡಿಸೆಂಬರ್ 8 ಮತ್ತು 9 ರಂದು "ಶಾಂತಿಯಿಂದ ಸಮೃದ್ಧಿಗೆ" ಎಂಬ ಶೀರ್ಷಿಕೆ ಅಡಿಯಲ್ಲಿ ನಡೆಯಲಿದೆ. ಈ ಶೃಂಗಸಭೆಯಲ್ಲಿ ವಿಶ್ವದಾದ್ಯಂತದ ಸಾವಿರಾರು ಹೂಡಿಕೆದಾರರು ಮತ್ತು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕೇಂದ್ರ ಸಚಿವರು, ವಿವಿಧ ದೇಶಗಳ ರಾಯಭಾರಿಗಳು ಮತ್ತು ಪ್ರಮುಖ ಕೈಗಾರಿಕೋದ್ಯಮಿಗಳು ಪಾಲ್ಗೊಳ್ಳಲಿದ್ದಾರೆ.

# ಸಮ ಸಮಾಜ ನಿರ್ಮಾಣಕ್ಕೆ ಸಂವಿಧಾನ ದಿಕ್ಸೂಚಿ

## ದಲಿತ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕ ಡಾ. ಚಿನ್ನಸ್ವಾಮಿ ಸೋಸಲೆ ಅಭಿಮತ



**ಹಂಪಿ ಟೈಮ್ಸ್ ಹೊಸಪೇಟೆ**
ಅಂಬೇಡ್ಕರ್ ಅವರ ಚಿಂತನೆಗಳು ಜನಸಾಮಾನ್ಯರ ದಿಕ್ಸೂಚಿಯಾಗಿದ್ದು, ಅವರು ಲಕ್ಷಾಂತರ ಜನರಿಗೆ ದಾರಿದೀಪದಂತೆ ಜನಸಾಮಾನ್ಯರಲ್ಲಿ ಇಂದಿಗೂ ಪ್ರಜ್ವಲಿಸುತ್ತಿದ್ದಾರೆ ಎಂದು ಕನ್ನಡ ವಿಶ್ವವಿದ್ಯಾಲಯದ ದಲಿತ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕ ಡಾ. ಚಿನ್ನಸ್ವಾಮಿ ಸೋಸಲೆ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಬುಧವಾರ ದಲಿತ ಸಂಸ್ಕೃತಿ ಅಧ್ಯಯನ ಪೀಠದಿಂದ ಹಮ್ಮಿಕೊಂಡಿದ್ದ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ 67ನೇ ಮಹಾ ಪರಿನಿಬ್ಬಾಣ ದಿನಾಚರಣೆ ಅಂಗವಾಗಿ ಅಂಬೇಡ್ಕರ್ ಅವರ ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು. ಶತಮಾನಗಳಿಂದ ತುಳಿತಕ್ಕೆ ಒಳಗಾದ ತಳವರ್ಗ ಹಾಗೂ ತಳಸ್ಪರ್ಶಿಯ ಸಮುದಾಯಗಳ ಸಮಾನತೆಗಾಗಿ ಹಾಗೂ ಅವರ ಅಭಿವೃದ್ಧಿಗಾಗಿ ಸಂವಿಧಾನದ ಮೂಲಕ ಮಾರ್ಗಸೂಚಿಯನ್ನು ನಮ್ಮ ರಾಷ್ಟ್ರಕ್ಕೆ ಅರ್ಪಿಸಿದ್ದಾರೆ. ಪ್ರಮುಖವಾಗಿ ಅಂಬೇಡ್ಕರ್ ಅವರು ಸ್ವಾತಂತ್ರ್ಯದ ಹೋರಾಟವನ್ನು ಬುದ್ಧನ ದಾರಿಯಂತೆ ಹಾಗೂ ಬಸವಣ್ಣನನ್ನು ದೀಪವಾಗಿಸಿಕೊಂಡು ಅವರ ಬೌದ್ಧಿಕ ಅಂಶಗಳನ್ನು ತಮ್ಮ ಹೋರಾಟದ ಹಾದಿಯಲ್ಲಿ ಅಳವಡಿಸಿಕೊಂಡು ಜೀವನದ ಉದ್ದಕ್ಕೂ ಜನ್ಮಸಾಮಾನ್ಯರ ಸಮಾನತೆ, ಭ್ರಾತೃತ್ವ, ಸಹಬಾಳ್ವೆ ಹಾಗೂ ಸಮ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿ ಭಾರತದ ಸಂವಿಧಾನವನ್ನು ರಚಿಸಿದಂತಹ ಮಹಾನ್ ವ್ಯಕ್ತಿ. ಶತಮಾನಗಳಿಂದ ಆಚರಣೆಯಲ್ಲಿದ್ದ ರೂಢಿ, ಸಂಪ್ರದಾಯ ಹಾಗು ಕಟ್ಟುಪಾಡುಗಳು ನಮ್ಮನ್ನು ಮೌನಿಯಾಗಿಸಿದ್ದವು, ಆದರೆ ಅಂಬೇಡ್ಕರ್ ಅವರ ಸಂವಿಧಾನವು ನಿರಂತರವಾಗಿ ಪ್ರಶ್ನೆ ಮಾಡುವ ಅವಕಾಶವನ್ನು ಜನಸಾಮಾನ್ಯರಿಗೆ ಕಲ್ಪಿಸಿದೆ ಎಂದರು.

ಇನ್ನೂ ಇಂತಹ ಸಂವಿಧಾನವು ಕೆಲವರ ಸಂಕೋಲೆಯಲ್ಲಿ ಬಂದಿಯಾಗಿ, ಒತ್ತಡಗಳಿಗೆ ಬಲಿಯಾಗಿ ಹಾಗೂ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುವುದು ನೋವಿನ ಸಂಗತಿ. ಪ್ರಸ್ತುತ ದಿನಗಳಲ್ಲಿ ಸಂವಿಧಾನ ಮಾತನಾಡುವುದಕ್ಕಿಂತ ಸಂವಿಧಾನದ ಅಡಿಯಲ್ಲಿ ಸ್ಥಾಪಿತಗೊಂಡಿರುವ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಮಾತನಾಡುತ್ತಿರುವುದು ದುರ್ದೈವವಾಗಿದೆ. ಆದರೆ ನಾವು ಪುರಾಣಗಳನ್ನು ಗೌರವಿಸುತ್ತಿದ್ದು, ವಾಸ್ತವಾಂಶಗಳನ್ನು ಪ್ರತಿಪಾದಿಸುತ್ತಿರುವ ಸಂವಿಧಾನವನ್ನು ಗೌರವಿಸುತ್ತಿಲ್ಲ ಎನ್ನುವುದೇ ಬೇಸರವನ್ನು ಉಂಟು ಮಾಡಿದೆ. ಮುಖ್ಯವಾಗಿ ಪ್ರಸ್ತುತ ಒಂದು ವರ್ಗ ದುಡಿಸಿಕೊಳ್ಳುತ್ತಿದ್ದರೆ, ಇನ್ನೊಂದು ವರ್ಗ ದುಡಿಯುತ್ತಿದ್ದಾರೆ. ದುಡಿಸಿಕೊಳ್ಳುವವರು ಸುಭದ್ರವಾಗಿದ್ದು, ದುಡಿಯುವವರು ಅಭದ್ರತೆಯಲ್ಲಿ ನಲಗುತ್ತಿದ್ದಾರೆ. ಭಾರತ ಹಾಗೂ ಭಾರತೀಯತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ >>2

# ಪೊಲೀಸ್ ಬಂಧನಕ್ಕೆ ಆಗ್ರಹ ವಕೀಲರ ಸಂಘದಿಂದ ಒತ್ತಾಯ



**ಹಂಪಿ ಟೈಮ್ಸ್ ಹೊಸಪೇಟೆ**
ಚಿಕ್ಕಮಂಗಳೂರಿನಲ್ಲಿ ಹೆಲ್ಮೆಟ್ ಧರಿಸುವ ವಿಚಾರದಲ್ಲಿ ವಕೀಲ ಪ್ರೀತಂ ಮೇಲೆ ಪೊಲೀಸರು ನಡೆಸಿದ ಹಲ್ಲೆಯನ್ನು ಹೊಸಪೇಟೆ ವಕೀಲರ ಸಂಘ ಖಂಡಿಸಿದೆ. ವಕೀಲರ ಮೇಲೆ ಹಲ್ಲೆ ಮಾಡಿದ ಪೊಲೀಸರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ಹೊಸಪೇಟೆ ವಕೀಲರ ಸಂಘ ಬುಧವಾರ ಪ್ರತಿಭಟನೆ ನಡೆಸಿತು.

ಸಂಘದ ಪ್ರಧಾನ ಕಾರ್ಯದರ್ಶಿ ಮಾತನಾಡಿ, ಚಿಕ್ಕಮಂಗಳೂರಿನಲ್ಲಿ 19 ಜನ ವಕೀಲರ ಮೇಲೆ ವಿನಾಕಾರಣ ಸುಳ್ಳು ಮೊಕದ್ದಮೆಗಳನ್ನು ಹಾಕಿದ್ದಾರೆ. ಪೊಲೀಸರಿಗೆ ಇರುವ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಚಿಕ್ಕಮಂಗಳೂರಿನ ವಕೀಲರ ಮೇಲೆ ಹಾಕಿರುವ ಎಲ್ಲಾ ಪ್ರಕರಣಗಳನ್ನು ಹಿಂದಕ್ಕೆ ಪಡೆಯಬೇಕು. ವಕೀಲರ ಸಂರಕ್ಷಣಾ ಕಾಯ್ದೆಯನ್ನು ಈಗ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿಯೇ ಮಂಡನೆ ಮಾಡಬೇಕು. ಸಿಎಂ ಸಿದ್ದರಾಮಯ್ಯನವರು ಸಹ ಓರ್ವ ವಕೀಲರು ಎಂಬುದನ್ನು ಮರೆಯಬಾರದು ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ.ವಿ.ಬಸವರಾಜ ಮಾತನಾಡಿದರು. ನಗರದ ನ್ಯಾಯಾಲಯದ ಆವರಣದಿಂದ ಹೊರಟ ಹೊಸಪೇಟೆ ವಕಲೀರ ಸಂಘ ನಗರದ ಪುನೀತ್ ರಾಜ್ ಕುಮರ್ ಸರ್ಕಲ್‌ಗೆ ತೆರಳಿ ಅಧಿಕಾರ ದುಪಯೋಗಪಡಿಸಿಕೊಂಡ ಪೊಲೀಸರ ವಿರುದ್ಧ ಘೋಷಣೆ ಕೂಗಿದರು. ನಂತರ ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟಿಸಿ, ತಹಶೀಲ್ದಾರ್ ವಿಶ್ವಜೀತ್ ಮೆಹ್ತ ಅವರ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

ವಕೀಲರ ಸಂಘದ ಉಪಾಧ್ಯಕ್ಷ ಈ.ಅಂಬನಗೌಡ, ಪಿ.ವೆಂಕಟೇಶ, ಮಹೇಶ, ಎನ್.ನೀಲಕಂಠಯ್ಯ, ರಮೇಶ, ಮಂಜುನಾಥ, ಹಿರಿಯ ವಕೀಲರಾದ ಎಸ್. ವಿ.ಜವಳಿ, ಕೆ.ಖಾಸಿಂ ಅಲಿ, ಎಚ್.ಎಸ್.ದಿವಾಕರ, ಮಕ್ಬೂಲ್ ಬಾಷಾ, ಡಿ.ವೀರನಗೌಡ, ತಾರಿಹಳ್ಳಿ ಹನುಮಂತಪ್ಪ, ಈ ಪುಷ್ಪಲತಾ, ಎಚ್.ಮಹೇಶ್, ಪಿ.ನಾಗಭೂಷಣ, ಎಸ್. ಲೊಕೇಶಬಾಬು, ಸುರಭಿದುರ್ಗಾ, ಮಹ್ಮದ್ ಹನೀಫ್, ವಕೀಲರಾದ ಯು.ಗೋಪಾಲ, ನೂರಬಾಷಾ, ದೇವೇಂದ್ರ, ಸದ್ದಾಂ ಹುಸೇನ್ ಮಹಾರಾಜ ರವಿ, ಮಂಜುನಾಥ, ಸಲೀಂ, ಎನ್. ಎಂ.ಸೌದಾಗರ್ ಮತ್ತಿತರರು ಇದ್ದರು.

ಕರ್ನಾಟಕ ಸರಕಾರ (ಸಹಕಾರ ಇಲಾಖೆ)

**ಸಹಕಾರ ಸಂಘಗಳ ಸಹಾಯಕ ನಿಬಂಧಕರು / ವಸೂಲಾತಿ ಅಧಿಕಾರಿಗಳು ಉಪವಿಭಾಗ ಹೊಸಪೇಟೆ. (ನಿ.441)**

## ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,

**ಪ್ರಧಾನ ಕಛೇರಿ : ಹೊಸಪೇಟೆ , ಶಾಖೆ : ಎ.ಪಿ.ಎಂ.ಸಿ ಶಾಖೆ ಹೊಸಪೇಟೆ**

## ಬಹಿರಂಗ ಹರಾಜು ನೋಟಿಸ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಬಳ್ಳಾರಿ ಜಿಲ್ಲಾ ಸಹಕಾರಕೇಂದ್ರ ಬ್ಯಾಂಕ್ ನಿ., ಎ,ಪಿ,ಎಂ,ಸಿ ಹೊಸಪೇಟೆ ಶಾಖೆಯಿಂದ ಸಾಲ ಪಡೆದು ಸುಸ್ತಿದಾರರಾಗಿ ಡಿಕ್ರಿಯಾಗಿರುವ ಈ ಕೆಳಗೆ ನಮೂದಿಸಿದವರ ಸ್ಥಿರ ಸ್ವತ್ತುಗಳನ್ನು ಈ ಕೆಳಗಿನ ದಿನಾಂಕದಂದು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಈ ಕೆಳಗೆ ನಮೂದಿಸಿದ ಆಸ್ತಿ ಖರೀದಿಗೆ ಆಸಕ್ತಿಯುಳ್ಳವರುಬಳ್ಳಾರಿ ಜಿಲ್ಲಾ ಸಹಕಾರಕೇಂದ್ರ ಬ್ಯಾಂಕ್ ನಿ., ಎ,ಪಿ,ಎಂ,ಸಿ ಹೊಸಪೇಟೆಯ ಈ ಕೆಳಕಾಣಿಸಿದ ಸ್ಥಳ&ದಿನಾಂಕದಂದು ಪ್ರಾರಂಭವಾಗುವ ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಹಾಜರಿದ್ದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ1959 ನಿಯಮ38ನೇ ರೂಲಿನ–2 (ಡಿ) ರ ಮೇರೆಗೆ ಮಾರಾಟ ವಾಡಿಕೆಯಲ್ಲಿರುವ ಷರತ್ತಿಗೊಳಪಟ್ಟು ಬಿಡ್ ಮೂಲಕ ಪಡೆಯಬಹುದು.

| ಕ್ರ.ಸ | ಶಾಖೆ, ಬಾಕಿದಾರರ ಹೆಸರು ಮತ್ತು ವಿಳಾಸ | ಇ.ಪಿ ಸಂಖ್ಯೆ | ಹರಾಜುಗುವ ಸ್ವತ್ತುಗಳ ವಿವರ | ಹರಾಜಿನ ಸ್ಥಳ ದಿನಾಂಕ ಮತ್ತು ವೇಳೆ | ಬರಬೇಕಾದ ಮೊಬಲಗು (ರೂ.) |
|---|---|---|---|---|---|
| 1. | ಬಳ್ಳಾರಿ ಡಿ.ಸಿ.ಸಿ.ಬ್ಯಾಂಕ್ ನಿ., ಎ,ಪಿ,ಎಂ,ಸಿ ಹೊಸಪೇಟೆ ಶಾಖೆ, ಹೊಸಪೇಟೆ ತಾಲ್ಲೂಕ ಮಟ್ಟದ ಕುಶಲ ಕರ್ಮಿಗಳ ವಿವಿಧೋದ್ದೇಶ ಸಹಕಾರ ಸಂಘ ನಿ ಹೊಸಪೇಟೆ | 07/1998–99 ದಿನಾಂಕ : 15.06.1999 | ಕಮಲಾಪುರ ಪುರಸಭೆ ವಾರ್ಡ ನಂ.02 ಕಂಪ್ಲಿ ರಸ್ತೆ ಬಲಭಾಗ ಹೊಸಬಸ್ ನಿಲ್ದಾಣದ ಹತ್ತಿರ (1) ಡೋ ನಂ.281 ಅಳತೆ ಒಟ್ಟು : 6720 ಚ ಅ (624.308160 ಚ ಮಿ) ಚೆಕ್ಕುಬಂದಿ ಪೂರ್ವ: 17–2–106, ಪಶ್ಚಿಮ : ರಸ್ತೆ ದಕ್ಷಿಣ: 17–2–100 ಉತ್ತರ: 17–2–104 (2) ಡೋ ನಂ.282 ಅಳತೆ ಒಟ್ಟು : 5587 ಚ ಅ (519.049061 ಚ ಮಿ) ಚೆಕ್ಕುಬಂದಿ ಪೂರ್ವ: 17–2–106, ಪಶ್ಚಿಮ : ರಸ್ತೆ ದಕ್ಷಿಣ: 17–2–102 ಉತ್ತರ : 17–2–106 | ಹರಾಜಿನ ಖಾಲಿ ನಿವೇಶನದ ಮುಂಭಾಗದಲ್ಲಿ 2023 ಡಿಸೆಂಬರ್ 08 ಶುಕ್ರವಾರ ಪೂರ್ವಹ್ನ 11.30 ಗಂಟೆಗೆ ಪ್ರಾರಂಭ ವಾಗುವುದಿದ್ದು | ದಿನಾಂಕ : 04.11.2023ಕ್ಕೆ ರೂ.692680.33 /– ಮತ್ತು ಮುಂದಿನ ಬಡ್ಡಿ ಹಾಗೂ ಇತರೆ ಖರ್ಚು |

ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ರೂ.20,000/–ಇ.ಎಮ್.ಡಿ ಪಾವತಿಸಿ ಹಾಗೂ ಹೆಚ್ಚಿನ ವಿವರಗಳನ್ನು ಬ್ಯಾಂಕಿನ ಮಾರಾಟಾಧಿಕಾರಿಯವರಿಂದ ಅಥವಾ ಬ್ಯಾಂಕಿನ ಆಡಳಿತ ಕಛೇರಿಯಿಂದ ಹಾಗೂ ಶಾಖಾಧಿಕಾರಿಗಳಿಂದ ಪಡೆಯಬಹುದು. ದೂರವಾಣಿ( 9591122331 & 9845126006)& ಸಹಕಾರ ಸಂಘಗಳ ಸಹಾಯಕ ನಿಬಂಧಕರು / ವಸೂಲಾತಿ ಅಧಿಕಾರಿಗಳು ಉಪವಿಭಾಗ ಹೊಸಪೇಟೆ. (ನಿ.441)

ಸ್ಥಳ : ಕಂಪ್ಲಿ
ದಿನಾಂಕ: 06.12.2023

ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,

ಸಹಿ/– ಮಾರಾಟಾಧಿಕಾರಿ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,

ಸಹಿ/– ಸಹಕಾರ ಸಂಘಗಳ ಸಹಾಯಕ ನಿಬಂಧಕರು / ವಸೂಲಾತಿ ಅಧಿಕಾರಿಗಳು ಉಪವಿಭಾಗ ಹೊಸಪೇಟೆ. (ನಿ.441) ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,

**ಹರಾಜಿನಲ್ಲಿ ಭಾಗವಹಿಸಲು ಷರತ್ತುಗಳು : 1) EMD ಮೊತ್ತವನ್ನು ಭರಿಸುವವರು ಹರಾಜಿನ ದಿನಾಂಕದಂದು 1 ಗಂಟೆ ಮೊದಲು ಈ ಕೆಳಗೆ ಸೂಚಿಸಿದ ಖಾತೆಗೆ ನಗದು (Cash) / RTGS / NEFT / IMPS ಮುಖಾಂತರ ಸಂದಾಯ ಮಾಡತಕ್ಕದ್ದು & UTR NO ನ್ನು ನೀಡತಕ್ಕದ್ದು.**

**ACCOUNT DETAILS : The Manager Bellari.DCC BANK, KAMPLI MAIN, A/C NO 20027301000072 IFSC Code : IBKL0103903**

ವಿಶೇಷ ಸೂಚನೆ:– ಸದರಿ ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಹಾಗೂ ರದ್ದುಪಡಿಸುವ ಸಂಪೂರ್ಣ ಅಧಿಕಾರ ಮಾರಾಟಾಧಿಕಾರಿಗೆ ಇರುತ್ತದೆ.

### ಇಂದು ವಿಶ್ವ ವಿಶೇಷ ಚೇತನರ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ರೋಟರಿ ಕ್ಲಬ್, ಹೊಸಪೇಟೆ ನಗರ ಮತ್ತು ಗ್ರಾಮೀಣ ಘಟಕ ವಿಕಲಚೇತನರ ಸಂಘ ಹಾಗೂ ಮಯೂರಿ ಮಹಿಳಾ ವಿಕಲಚೇತನರ ಸಂಘ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಶೇಷ ಚೇತನರ ದಿನಾಚರಣೆಯನ್ನ ನಗರದ ರೋಟರಿ ಕ್ಲಬ್ ನಲ್ಲಿ ಡಿ.7ರಂದು ಬೆಳಿಗ್ಗೆ 10:30ಕ್ಕೆ ಹಮ್ಮಿಕೊಳ್ಳಲಾಗಿದೆ. ನಗರಸಭೆ ಅಧ್ಯಕ್ಷೆ ಕುಮಾರಿ ಎ.ಲತಾ ಉದ್ಘಾಟಿಸಲಿದ್ದಾರೆ. ಲೋಹಿತ್ ತಳವಾರ್ ಅಧ್ಯಕ್ಷತೆವಹಿಸಲಿದ್ದಾರೆ. ವಿವಿಧ ಸಂಘಟನೆಯ ಮುಖಂಡರು ಉಪಸ್ಥಿತರಿರಲಿದ್ದಾರೆ. ತಾಲೂಕಿನ ವಿವಿಧ ಭಾಗಗಳಿಂದ ವಿಶೇಷಚೇತನರು ಆಗಮಿಸಲ್ಲಿದ್ದು ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುವುದು ಎಂದು ಹೊಸಪೇಟೆ ನಗರ ಘಟಕ ವಿಕಲಚೇತನರ ಸಂಘ ಅಧ್ಯಕ್ಷ ಲೋಹಿತ ತಳವಾರ ತಿಳಿಸಿದ್ದಾರೆ.




## ವಚನ ಅರಿವು

### ಸತ್ಪಾತ್ರದ ಧನ

**ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ,**
**ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ.**
**ನಮ್ಮ ಕೂಡಲಸಂಗನ ಶರಣರಿಗಲ್ಲದೆ**
**ಮಾಡುವ ಅರ್ಥ ವ್ಯರ್ಥ ಕಂಡಯ್ಯಾ.**

**– ಬಸವಣ್ಣ**

ಮನುಷ್ಯ ಹಣವನ್ನು ಗಳಿಸಲಿಕ್ಕೆ ಅಡ್ಡದಾರಿ ಹಿಡಿದು, ಮಾಡಬಾರದ ಕೆಲಸವನ್ನು ಮಾಡಿ ಹಣವನ್ನು ಸಂಗ್ರಹಿಸುತ್ತಾನೆ. ಕೊನೆಗಾಲದಲ್ಲಿ ಪುಣ್ಯ ದೊರೆಯಲಿ ಎಂದೋ, ಮುಕ್ತಿ ದೊರೆಯಲಿ ಎಂದೋ ಅಥವ ತನ್ನ ಪ್ರತಿಷ್ಠೆಗೆ ಹಣವನ್ನು ದಾನಮಾಡಿ ಹೆಸರುಗಳಿಸುವ ಪ್ರಯತ್ನ ಮಾಡುತ್ತಾನೆ. ಇಂತಹ ಸ್ವಾರ್ಥ ಸಾಧಕರ ಹಣ ಒಳ್ಳೆಯ ಕೆಲಸಕ್ಕೆ ಬರುವುದಿಲ್ಲ. ಅದು ಅವನ ಪಾಪಪ್ರಜ್ಞೆಯನ್ನು ಎಚ್ಚರಿಸುತ್ತ ತನ್ನ ಪಾಪವನ್ನು ಕಳೆದುಕೊಳ್ಳುವ ವಿಧಾನವಾಗಿರುತ್ತದೆ ಹೊರತು ದಾಸೋಹವಾಗಿರುವುದಿಲ್ಲ. ಪಂಚಾಮೃತಕ್ಕೆ ನಾಯಿಯ ಹಾಲನ್ನು ಬಳಸುವುದಿಲ್ಲ. ತನಗೆ ಅವಶ್ಯಕತೆ ಇಲ್ಲದಿರುವುದನ್ನು ತನ್ನ ಬಳಿ ಇಟ್ಟುಕೊಳ್ಳದೆ, ಅವಶ್ಯ ಇರುವವರಿಗೆ ಹಂಚಿಕೆ ಮಾಡುವುದು ದಾಸೋಹವಾಗಿದೆ. ಶರಣರ ಸೇವೆಗೆ, ಸಮಾಜದ ಉದ್ಧಾರಕ್ಕೆ ಮಾಡುವ ದಾಸೋಹ ಶ್ರೇಷ್ಠವಾದುದು. ಕಾಯಕದಿಂದ ಬಂದುದು ಮಾತ್ರ ಸತ್ಪಾತ್ರಕ್ಕೆ ಸಲ್ಲುವಂತಹದ್ದು ಎನ್ನುತ್ತದೆ ಬಸವಣ್ಣನವರ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಸಂವಿಧಾನ ಪಾಲನೆಯಿಂದ ಸಮ ಸಮಾಜ ನಿರ್ಮಾಣ

ಮೊದಲ ಪುಟದಿಂದ

ಅಂಬೇಡ್ಕರ್ ಅವರ ಚಿಂತನೆಯನ್ನು ಗಮನಿಸಬೇಕಾಗುತ್ತದೆ. ಆದರೆ ಇಂದು ನಾವು ಶಿಕ್ಷಣವನ್ನು ಮಾತ್ರ ಪಡೆಯುತ್ತಿದ್ದೇವೆ ಹೊರತು, ಶಿಕ್ಷಿತರಾಗುತ್ತಿಲ್ಲ. ಶಿಕ್ಷಣ ಪಡೆದ ನಾವೇ ಜಾತಿ ಪದ್ಧತಿ ಮೇಲು–ಕೀಳು ಎನ್ನುವ ಅನೇಕ ಸಾಮಾಜಿಕ ಪಿಡುಗುಗಳನ್ನು ಆಚರಿಸುತ್ತಿರುವುದು ಅವಮಾನೀಯ. ಮನುಷ್ಯ ಎಂದರೆ ಗಂಡು ಹೆಣ್ಣು ಅಷ್ಟೇ. ಬುದ್ಧ, ಬಸವಣ್ಣ, ಅಂಬೇಡ್ಕರ್ ಹಾಗೂ ಇತರೆ ಮಹನೀಯ ಸಮಾಜ ಸುಧಾರಕರ ಚಿಂತನೆಗಳಲ್ಲಿ ಭಾರತವನ್ನು ಕಟ್ಟಬೇಕಾಗಿದೆ. ಆಗ ಮಾತ್ರ ಸದೃಢ ಭಾರತವನ್ನು ಕಾಣಬಹುದು. ಪ್ರಮುಖವಾಗಿ ಬುದ್ಧ ಬಸವಣ್ಣ ಹಾಗೂ ಅಂಬೇಡ್ಕರ್ ಅವರ ಚಿಂತನೆಗಳು ಕೇವಲ ಒಂದು ಧರ್ಮಕ್ಕೆ ಸೀಮಿತಗೊಳಿಸಬಾರದು ಎಂದು ತಿಳಿಸಿದರು.

ಕನ್ನಡ ವಿವಿ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ ಅವರು ನಾವು ಅಂಬೇಡ್ಕರ ಅವರನ್ನು ಎಷ್ಟರಮಟ್ಟಿಗೆ ಅನುಸರಿಸುತ್ತಿದ್ದೇವೆ ಎನ್ನುವುದು ಮುಖ್ಯ. ಆದರೆ ಮಾತನಾಡುವುದು ಸುಲಭ. ಅವರ ತತ್ವ ಆದರ್ಶಗಳನ್ನ ಪಾಲನೆ ಮಾಡಬೇಕು. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯವು ತಳಸಮುದಾಯಗಳ ಹಾಗೂ ತಳಸ್ಪರ್ಶೀಯ ರೀತಿಯಲ್ಲಿ ಅನೇಕ ಸಂಶೋಧನೆಗಳ ಮೂಲಕ ಅಧ್ಯಯನಗಳನ್ನು ನಿರಂತರವಾಗಿ ಮಾಡುತ್ತಾ ಬಂದಿದೆ ಎಂದರು.

ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಭಾರತವು ಬಹುದೊಡ್ಡ ಶ್ರಮಿಕ ಸಮುದಾಯವನ್ನು ಒಳಗೊಂಡಿರುವ ಸಮಾಜವಾಗಿದೆ. ಶ್ರಮಿಕ ಸಮುದಾಯಗಳಿಗೆ ಡಾ. ಬಿ.ಆರ್.ಅಂಬೇಡ್ಕರ್ ಅವರು ಧ್ವನಿಯಾಗಿದ್ದರು. ಸಾಮಾಜಿಕ ಶ್ರೇಣಿಕೃತ ವ್ಯವಸ್ಥೆಯಲ್ಲಿ ತಳಸಮುದಾಯಗಳ ಏಳಿಗೆಗೆ ಶ್ರಮಿಸಿ, ಸಂವಿಧಾನ ರಚನೆಯಲ್ಲಿ ತಮಗೆ ಸಿಕ್ಕ ದೊಡ್ಡ ಅವಕಾಶವನ್ನು ಬಳಸಿಕೊಂಡು ಸ್ವಾರ್ಥರಹಿತ ಸಂವಿಧಾನವನ್ನು ಜನಸಾಮಾನ್ಯರಿಗೆ ನೀಡಿದ್ದಾರೆ. ಅವರ ಚಿಂತನೆ ಹಾಗೂ ತತ್ವಾದರ್ಶಗಳನ್ನು ಪಾಲನೆ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ನುಡಿದರು. ಕನ್ನಡ ವಿಶ್ವವಿದ್ಯಾಲಯದ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕ–ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇನ್ನು ಚರಿತ್ರೆ ವಿಭಾಗದ ಸಂಶೋಧನಾರ್ಥಿ ಯಾದ ನರಸಿಂಹ, ಮಧು, ಸಾವಿತ್ರಿ ನಿರ್ವಹಿಸಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

# ದುಡಿಮೆ ಬದ್ಧತೆ ಘನತೆವೆತ್ತ ಮೇಷ್ಟ್ರು

ನಾನು ಕನ್ನಡ ಎಂ.ಎ. ಓದಲು ಮೈಸೂರಿನ ಮಾನಸಗಂಗೋತ್ರಿಗೆ ಹೋಗಲು ಇದ್ದ ಪ್ರಮುಖ ಆಕರ್ಷಣೆಗಳಲ್ಲಿ, ಪ್ರಭುಶಂಕರ, ಪುಣೇಕರ, ಚನ್ನಯ್ಯ, ಜಿ.ಎಚ್.ನಾಯಕ ಮೊದಲಾದ ಪ್ರಸಿದ್ಧ ವಿದ್ವಾಂಸರ ಬಳಿಕ ಕಲಿಯಬಹುದು ಎಂಬುದೂ ಒಂದು. ನಾಯಕರದು ಆಗ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ದೊಡ್ಡ ಹೆಸರು. ಅವರು ತೆಗೆದುಕೊಂಡ ಮೊದಲ ತರಗತಿ ನೆನಪಾಗುತ್ತಿದೆ. ಗೌರವರ್ಣದ ಎತ್ತರದಾಳು. ನಲವತ್ತೈದು ದಾಟಿದ ಪ್ರಾಯ. ಎಣ್ಣೆಹಾಕಿ ಹಿಂದಕ್ಕೆ ಬಾಚಿದ ತಲೆಕೂದಲು. ಹೊಳೆವ ಕಂಗಳು. ಚಂದದ ದಂತಪಂಕ್ತಿ ಕಾಣಿಸುವ ಹಾಸ. ರಸಪ್ರಸಂಗ ಹೇಳುತ್ತ ಸ್ವತಃ ಕೆಂಪಗಾಗುವ ಮುಖ. ತಮ್ಮ ಆಳ್ತನ, ಪಾಠ, ವೈಚಾರಿಕತೆ, ಹಾಸ್ಯಪ್ರಜ್ಞೆ, ವಿಶ್ವಾಸಪೂರ್ವಕ ಗುಣಗಳಿಂದ ಅವರು ನಮ್ಮ ಹೀರೊ ಆಗಿಬಿಟ್ಟರು.

ನಾಯಕರು ನಮಗೆ ಮೊದಲ ವರ್ಷ ಟಿ.ಎಸ್.ಎಲಿಯಟ್‌ನ 'ಟ್ರೆಡಿಶನ್ ಆ?ಯಂಡ್ ಇಂಡಿವಿಜ್ಯುವಲ್ ಟೆಲೆಂಟ್' ಪ್ರಬಂಧವನ್ನೂ ಎರಡನೇ ವರ್ಷ ಕಾರಂತರ ಕಾದಂಬರಿಗಳನ್ನೂ ತೆಗೆದುಕೊಂಡರು. ಎಲಿಯಟ್, ಅವರಿಗೆ ಪ್ರಿಯ ಚಿಂತಕನಾಗಿದ್ದ. ಲೇಖಕರಿಗೆ ಸಾಹಿತ್ಯ ಪರಂಪರೆಯಲ್ಲಿರುವ ಸತ್ವವು ಆನುವಂಶಿಕವಾಗಿ ಬರುವುದಿಲ್ಲವೆಂದೂ, ಶ್ರಮ–ಶ್ರದ್ಧೆಗಳಿಂದ ಅನುಸಂಧಾನಿಸುತ್ತ ಅದನ್ನು ಗಳಿಸಿಕೊಳ್ಳಬೇಕೆಂದೂ, ಬಳಿಕ ಅದು ವ್ಯಕ್ತಿಪ್ರತಿಭೆಯ ಕುಲುಮೆಯಲ್ಲಿ ಮರುಸೃಷ್ಟಿಗೊಂಡು ಹೊಸತನ್ನು ಸೃಷ್ಟಿಸುತ್ತದೆಯೆಂದೂ ಆತ ಪ್ರತಿಪಾದಿಸುತ್ತಾನೆ. ಪರಂಪರೆಯಲ್ಲಿ ಹೊಸತಾಗಿ ಉತ್ಕೃಷ್ಟವಾದ ಕೃತಿ ಪ್ರಕಟವಾದೊಡನೆ ಅದು ತನಗಿಂತ ಹಿಂದೆ ಬಂದ ಕೃತಿಗಳ ಸ್ಥಾನಪಲ್ಲಟ ಮಾಡಿಬಿಡುತ್ತದೆ ಎನ್ನುತ್ತಾನೆ. ನಾಯಕರು ಎಲಿಯಟ್‌ನ ಪ್ರತಿಸಾಲನ್ನೂ ಓದುತ್ತ, ಅಲ್ಲಿರುವ ಸಾಹಿತ್ಯತತ್ವವನ್ನು ಪಂಪ, ಬೇಂದ್ರೆ, ಅಡಿಗರ ನಿದರ್ಶನಗಳ ಮೂಲಕ ವಿಶ್ಲೇಷಿಸುತ್ತ, ಕರ್ನಾಟಕದ ವಿದ್ಯಮಾನಗಳನ್ನು ಲಗತ್ತಿಸುತ್ತ ಪಾಠ ಮಾಡಿದರು. ಅವರ ಉಪನ್ಯಾಸವು ಹಲಸಿನ ಹಣ್ಣನ್ನು ಹುಶಾರಾಗಿ ಕೊಯ್ದು ತೊಳೆ ಬಿಡಿಸಿ ತಿನಿಸುವಂತಿತ್ತು. ಕೆಲವೊಮ್ಮೆ ರಭಸವಿಲ್ಲದೆ ಗುಡ್ಡಗಳ ನಡುವೆ ವಿರಾಮಭಾವದಲ್ಲಿ ಹರಿದು ಕಡಲನ್ನು ಕೂಡುವ ಅಘನಾಶಿನಿ ಹೊಳೆ. ಅವರ ವ್ಯಕ್ತಿತ್ವಕ್ಕಾಗ ಇನ್ನೊಂದು ಪ್ರಭಾವಳಿ ಲಗತ್ತಾಗಿತ್ತು. ಅದು, ಯೂನಿವರ್ಸಿಟಿ ರಾಜಕಾರಣದಲ್ಲಿ, ಜಾತಿ ಮತ್ತು ವಶೀಲಿಯ ಮೂಲಕ ಮೇಲೇರುವ ಒಳಮಾರ್ಗವನ್ನು ತೊರೆದು, ದಿಟ್ಟನಿಲುವುಗಳ ಮೂಲಕ ಅಧಿಕಾರಸ್ಥರನ್ನು ಎದುರುಹಾಕಿಕೊಂಡು, ನ್ಯಾಯವಾಗಿ ಸಿಗಬೇಕಾದ ಬಡ್ತಿಗಳನ್ನು ಕಳೆದುಕೊಂಡು, ವಿದ್ಯಾರ್ಥಿಗಳಿಗೆ ಪ್ರಿಯ ಪ್ರಾಧ್ಯಾಪಕನಾಗುವ ಅಪೂರ್ವ ಮಾದರಿ ನಿರ್ಮಿಸಿದ್ದು. ನಾಯಕರು ಸಾಹಿತ್ಯ ಕೃತಿ ಮತ್ತು ತತ್ವಗಳ ಬಗ್ಗೆ ಚರ್ಚಿಸಿದರೂ, ಅವರ ವಿಮರ್ಶೆಯು ಸಮಾಜ ಮತ್ತು ಬಾಳನ್ನು ಕುರಿತ ಅವರ ಲೋಕದೃಷ್ಟಿಯ ಭಾಗವಾಗಿ ಹೊರಳಿಕೆ ಪಡೆಯುತ್ತಿತ್ತು. ಸಾಹಿತ್ಯ ಪಾಠದ ಜತೆಯಲ್ಲಿ ಮನಸ್ಸನ್ನು ರೂಪಿಸಲು ಸಾಹಿತ್ಯ ಅಧ್ಯಾಪಕರಿಗೆ ಸಿಗುವ ಈ ವಿಶೇಷ ಸವಲತ್ತನ್ನು ಅವರು ಚೆನ್ನಾಗಿ ಬಳಸಿಕೊಂಡರು. ವಿದ್ಯಾರ್ಥಿಗಳ ಸಾಹಿತ್ಯಿಕ ಮತ್ತು ಸಾಮಾಜಿಕ ಸಂವೇದನೆಯನ್ನು ರೂಪುಗೊಳಿಸಿದರು. ವೈಚಾರಿಕತೆ ವಿಷಯದಲ್ಲಿ ವಜ್ರದ ಕಠಿಣತೆಯನ್ನೂ ಮನುಷ್ಯ ಸಂಬಂಧಗಳ ವಿಷಯದಲ್ಲಿ ಕುಸುಮದ ಮೃದುತ್ವವನ್ನೂ ಅವರ ವ್ಯಕ್ತಿತ್ವ ಒಳಗೊಂಡಿತ್ತು. ಎಲಿಯಟ್‌ನ ಚಿಂತನೆಯಲ್ಲಿರುವ ವೈಯಕ್ತಿಕತೆ, ನವ್ಯದವರಿಗೆ ಪ್ರಿಯವಾದ ಮೌಲ್ಯಾದರ್ಶ. ನಾಯಕರು (ತೇಜಸ್ವಿ ಕೂಡ) ವ್ಯಕ್ತಿಯ ಸ್ವಾತಂತ್ರ್ಯದ ಮತ್ತು ಸೃಜನಶೀಲ ಸೀಮೋಲ್ಲಂಘನೆಯ ಈ ಪ್ರಶ್ನೆಯನ್ನು, ಸಮಾಜವನ್ನು ಪ್ರಭಾವಿಸುವ ಬೌದ್ಧಿಕ ಹೊಣೆಗಾರಿಕೆಯನ್ನಾಗಿ ವಿಸ್ತರಿಸುತ್ತಿದ್ದರು. ಸಾಹಿತ್ಯವನ್ನು ಪೂರ್ವಗ್ರಹ ಮತ್ತು ಮಮಕಾರಗಳಿಲ್ಲದೆ ಮುಖಾಮುಖಿಯಾಗುವ ವಿಧಾನಗಳನ್ನು ಕಲಿಸುವ ಹೊತ್ತಲ್ಲೇ, ಲೋಕವನ್ನು ನಿಷ್ಠುರ ವಿಮರ್ಶನ ಪ್ರಜ್ಞೆಯಿಂದ ನೋಡಬೇಕು ಮತ್ತು ವೈಯಕ್ತಿಕವಾಗಿ ಪ್ರಾಮಾಣಿಕವಾಗಿ ಬದುಕಬೇಕು ಎಂದು ನಾಯಕರು ವಿವರಿಸುತ್ತಿದ್ದರು. ಅವರ ಸಾಹಿತ್ಯಬೋಧೆ, ತತ್ವಚಿಂತನೆ, ಸಮಾಜಮುಖಿ ಆಕ್ಟಿವಿಸಂ ಮತ್ತು ವೈಯಕ್ತಿಕ ಬದುಕಿನ ನಡುವೆ ಜೈವಿಕ ಸಂಬಂಧವಿತ್ತು. ಇದನ್ನು ವೈಚಾರಿಕ ಮಾನವತಾವಾದ, ಜಾತ್ಯತೀತತೆ, ಸೃಜನಶೀಲ ಕಲಾಸಂವೇದನೆ, ವಿಮರ್ಶನ ನಿಷ್ಠುರತೆಗಳ ಅಪೂರ್ವ ಸಂಗಮ ಎನ್ನಬಹುದು. ಈ ಅರ್ಥದಲ್ಲಿ ಅವರೊಬ್ಬ ಸಂವಿಧಾನವಾದಿ. ಹೀಗಾಗಿಯೇ ಅವರಿಗೆ ಅಡಿಗ–ಅನಂತಮೂರ್ತಿಯವರ ಗಾಢಪ್ರಭಾವದಿಂದ ಬಿಡಿಸಿಕೊಂಡು, ಬಾಳಿನ ಎರಡನೇ ಹಂತದಲ್ಲಿ ಅಂಬೇಡ್ಕರ್ ಮತ್ತು ದಲಿತ ಚಳುವಳಿಯಲ್ಲಿ ತೊಡಗಿಕೊಳ್ಳಲು ಸಾಧ್ಯವಾಯಿತು.

ನಾಯಕರು ಅಧ್ಯಾಪಕರಾಗಿ, ವಿಮರ್ಶಕರಾಗಿ ಸಾಹಿತ್ಯದ ಗಂಭೀರ ಓದುಗರಾಗಿದ್ದರು. ಅವರ ಶಿಷ್ಯರಾಗಿ ನಾವು ಅವರ ಕೃತಿನಿಷ್ಠ ವಿಮರ್ಶೆಯ ಮಾದರಿಯಿಂದ ಗಾಢವಾಗಿ ಪ್ರಭಾವಿತವಾದೆವು. ಆದರೆ ಜಿ.ರಾಜಶೇಖರ–ಡಿ.ಆರ್.ನಾಗರಾಜ್ ಅವರ ವಿಮರ್ಶೆಯ ರುಚಿ ಹತ್ತಿದ ಬಳಿಕ, ಅವರ ವಿಮರ್ಶೆಯಲ್ಲಿದ್ದ ಆಸಕ್ತಿ ಕ್ಷೀಣಿಸಿತು. ಅದು 'ನಿಷ್ಪಕ್ಷಪಾತವಾದ ಸಮತೋಲನದ ಮೌಲ್ಯಮಾಪನ ಪ್ರಜ್ಞೆಯ ಅತಿಯೆಚ್ಚರದಲ್ಲಿ, ಸಾಹಿತ್ಯದ ಖುಷಿಯನ್ನು ಮತ್ತು ಸಾಮಾಜಿಕ ರಾಜಕೀಯ ಚಿಂತನೆಯ ಆಯಾಮವನ್ನು ಅದು ಕಡಿಮೆಗೊಳಿಸಿಕೊಂಡಿದೆ; ಪಂಪ, ರನ್ನ, ಬೇಂದ್ರೆ, ಕಾರಂತ, ಅಡಿಗ, ತೇಜಸ್ವಿ, ಅನಂತಮೂರ್ತಿ ಮೊದಲಾದ ಕೆಲವೇ ಲೇಖಕರತ್ತ ಸುಳಿದಾಡುತ್ತಿದೆ; ಅಭಿಜಾತವಾದಿ ಪ್ರಜ್ಞೆಯಿಂದ ಹುಟ್ಟಿದ ಎಲಿಯಟ್‌ನ ಮೇಜರ್–ಮೈನರ್ ಎಂಬ ಎದುರಾಳಿ ಪರಿಕಲ್ಪನೆಗಳ ಮೂಲಕ, ಕನ್ನಡದ ವಿಶಾಲ ವಾಙ್ಮಯ ಸೃಷ್ಟಿಸಿರುವ ಮಂಟೆಸ್ವಾಮಿ ಕಾವ್ಯದಿಂದ ಹಿಡಿದು ದೇವಚಂದ್ರನ 'ರಾಜಾವಾಳಿ ಕಥಾಸಾರ'ದಂತಹ ಸಾಂಸ್ಕೃತಿಕ ಪಠ್ಯಗಳನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲ' ಎಂದು ಅನಿಸತೊಡಗಿತು. ನಾಸ್ತಿಕವಾದಿ ಪಾಶ್ಚಿಮಾತ್ಯ ವೈಚಾರಿಕತೆಯಿಂದ ರೂಪುಗೊಂಡ ಚೌಕಟ್ಟುಗಳಿಗೆ ಸಿಗದೆ ಕೆಲವು ಸಾಂಸ್ಕೃತಿಕ ಲೋಕಗಳು ಹೊರಗುಳಿದುಬಿಡುತ್ತವೆ. ಮಹಾ ವೈಚಾರಿಕರಾದ ಕುವೆಂಪು, ಲಂಕೇಶ್, ದೇವನೂರು, ತೇಜಸ್ವಿ ಈ ಕೊರತೆಯನ್ನು ತಮ್ಮ ಕಲಾಕೃತಿಗಳ ಮೂಲಕ ದಾಟಿದರು. ವಿಮರ್ಶೆ ವಿಚಾರ ಪ್ರಕಾರಗಳಲ್ಲಷ್ಟೆ ಕೆಲಸ ಮಾಡುವವರಿಗೆ ಈ ದಾಟುವ ಅವಕಾಶ ಹೆಚ್ಚು ಸಿಗುವುದಿಲ್ಲ.



**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

ಆದರೆ ನಾಯಕರ ಸಾರ್ವಜನಿಕ ವ್ಯಕ್ತಿತ್ವವು ಅವರ ಸಾಹಿತ್ಯ ವಿಮರ್ಶೆಯಲ್ಲಿ ಇರುವುದಕ್ಕಿಂತ ಹೆಚ್ಚು ಬಹುಮುಖಿಯಾಗಿತ್ತು. ಅವರೊಬ್ಬ ಕನ್ನಡ ಹೋರಾಟಗಾರರಾಗಿದ್ದರು (ಗೋಕಾಕ ಚಳವಳಿಯಲ್ಲಿ ನಾವೆಲ್ಲ ಒಂದು ದಿನ ಬಯಲು ಸೆರೆಮನೆಯಲ್ಲಿದ್ದೆವು); ವಿಚಾರವಾದಿ ಚಳವಳಿಯ ಪ್ರಮುಖ ಚಿಂತಕರಾಗಿದ್ದರು; ಎಷ್ಟೇ ಆಪ್ತರಿದ್ದರೂ ವೈಭವದ ಸಂಪ್ರದಾಯಸ್ಥ ವರದಕ್ಷಿಣೆಯ ಮದುವೆಗಳಿಗೆ ಹೋಗುತ್ತಿರಲಿಲ್ಲ; ತಬ್ಬಲಿಗಳನ್ನು ಸಾಮಾಜಿಕ ಹಿಂಸೆಯಿಂದ ರಕ್ಷಿಸುವ ಮೈಸೂರಿನ 'ಒಡನಾಡಿ' ಸಂಸ್ಥೆ ಜತೆಗೆ ಅವರಿಗೆ ಲಗತ್ತಿತ್ತು; 'ದ್ವೇಷಬಿಟ್ಟು ದೇಶಕಟ್ಟು' ಹಾಗೂ ದಲಿತ ಚಳುವಳಿಯಲ್ಲಿ ಗುರುತಿಸಿಕೊಂಡಿದ್ದರು. ಅವರೊಬ್ಬ ಸಾರ್ವಜನಿಕರಿಗೆ ಕಹಿಯಾದ ಸತ್ಯ ಹೇಳುತ್ತ ಜನಪ್ರಿಯತೆ ಕಳೆದುಕೊಳ್ಳಲು ಹಿಂಜರಿಯದ ಪಬ್ಲಿಕ್ ಇಂಟಲೆಕ್ಚುವಲ್ ಕೂಡ ಆಗಿದ್ದರು. ಕುವೆಂಪು ಸಾಹಿತ್ಯದ ಮೇಲೆ ನಿಷ್ಠುರ ವಿಮರ್ಶೆ ಮಾಡಿದ್ದಕ್ಕೆ ಅವರನ್ನು ಕುವೆಂಪು ವಿರೋಧಿ ಮತ್ತು ಅಡಿಗರ ಬಣದವರು ಎಂದು ಗುರುತಿಸಲಾಗಿತ್ತು. ಆದರೆ ಕುವೆಂಪು ಅವರ ನಿರಂಕುಶಮತಿಯಂತಹ ವೈಚಾರಿಕ ವೈಜ್ಞಾನಿಕ ಮೌಲ್ಯಗಳನ್ನು ಬದುಕಿದವರಲ್ಲಿ ನಾಯಕರು ಒಬ್ಬರಾಗಿದ್ದರು. ಕಳೆದ ಅರ್ಧಶತಮಾನದಲ್ಲಿ ನಾಗರಿಕ ಸಮಾಜ ರೂಪಿಸಲು ಮತ್ತು ಮೈಸೂರಿನ ಸಾಂಸ್ಕೃತಿಕ ಹದುಳ ಕಾಪಾಡಲು ನಡೆದ ಬಹುತೇಕ ಸಭೆ/ಧರಣಿ/ಮುಷ್ಕರಗಳಲ್ಲಿ ಅವರ ಹಾಜರಾತಿ ಇರುತ್ತಿತ್ತು. ಅವರ ಮನೆಯಂತೂ ಅನುಭವ ಮಂಟಪದಂತೆ ಸಮಾಲೋಚನ ಸಭೆಯ ವೇದಿಕೆಯಾಗಿತ್ತು. ಅವರೆಲ್ಲ ಸಾರ್ವಜನಿಕ ಚಟುವಟಿಕೆಗಳಲ್ಲಿ ಮಡದಿ ಮೀರಾ ಜತೆಯಲ್ಲಿದ್ದರು.

ಮೈಸೂರಿಗೆ ಹೋದಾಗಲೆಲ್ಲ ನನ್ನಿಷ್ಟದ ಮನೆ 'ಪ್ರೀತಿ'ಗೆ ಹೋಗುತ್ತಿದ್ದೆ. ಅಲ್ಲಿಗೆ ಹೋಗುವುದು ಎಂದರೆ ನಾಯಕರ ಹರಟೆಯನ್ನೂ ಮೀರಕ್ಕ ತಯಾರಿಸುತ್ತಿದ್ದ ಉತ್ತರ ಕನ್ನಡ ಶೈಲಿಯ ಮೀನೂಟವನ್ನೂ ಸವಿವ ಅವಕಾಶವೂ ಆಗಿತ್ತು. ಊಟವಾದ ಬಳಿಕ ಮೂಡುಬಂದರೆ, ಮೇಷ್ಟರು ಬೇಂದ್ರೆಯವರ ಕವನಗಳನ್ನು ಹಾಡುವರು. ಯಾರದ್ದೊ ಕಾಲೆಳೆಯುತ್ತ ತಮಾಷೆಯ ಪ್ರಸಂಗ ಹೇಳುವರು. ನಾನೊಮ್ಮೆ ಅವರ ಸುದೀರ್ಘ ಸಂದರ್ಶನ ಮಾಡಿದೆ. ಅವರು ಅದರ ಕರಡನ್ನು ತಿದ್ದಿ ಒಂದೊಂದು ಪದವನ್ನು ಆಭರಣದಲ್ಲಿ ಹರಳನ್ನು ಕೂರಿಸಲು ಚಿನಿವಾರ ತೋರುವ ಎಚ್ಚರದಲ್ಲಿ ತಿದ್ದಿಕೊಟ್ಟರು. ಖಚಿತತೆಗೆ ಇಷ್ಟೊಂದು ರಿಸ್ಕ್ ತೆಗೆದುಕೊಳ್ಳುವುದುಂಟೇ?ನನಗೆಸೋಜಿಗ.ಅವರುಮಹತ್ವಾಕಾಂಕ್ಷೆಯಿಂದ ಬರೆದ ಆತ್ಮಕಥೆ 'ಬಾಳು' ಚಾರಿತ್ರಿಕವಾಗಿ ಮಹತ್ವದ ದಾಖಲಾತಿಯಾಗಿದೆ. ಆದರೆ ತನ್ನ ಖಾಚಿತ್ಯದ ವ್ಯಾಮೋಹದಲ್ಲಿ, ಬಾಳನ್ನು ಹಿಂತಿರುಗಿ ಲಹರಿಯಲ್ಲಿ ನೋಡುವಾಗ ಹುಟ್ಟುವ ಕಲ್ಪನಾವಿಲಾಸ ಮತ್ತು ವಿನೋದಪ್ರಜ್ಞೆಗಳನ್ನು ತಪ್ಪಿಸಿಕೊಂಡು ಬಡವಾಗಿದೆ. ನವರತ್ನ ರಾಮರಾಯರ 'ಕೆಲವು ನೆನಪುಗಳು' ಜತೆಯಲ್ಲಿಟ್ಟು ನೋಡಿದರೆ ಈ ಅಂಶ ಹೊಳೆಯುತ್ತದೆ.

ಕೆಲವು ತಿಂಗಳ ಹಿಂದೆ ಗುರುಗಳನ್ನು ಕಾಣಲು ಬಾನು ಜತೆ ಹೋದೆ. ಹೋಗಬಾರದಿತ್ತು ಅನಿಸಿತು. ಒಂದು ಕಾಲಕ್ಕೆ ಸ್ಫುರದ್ರೂಪಿಯಾಗಿದ್ದ ನಾಯಕರು ಸೊರಗಿ ಬತ್ತಿಯಾಗಿದ್ದರು. ಮೀರಕ್ಕ ಕೂಡ ಎಲುವಿನ ಹಂದರವಾಗಿದ್ದರು. ಮೇಷ್ಟ್ರಿಗೆ ನೆನಪು ನಷ್ಟವಾಗಿತ್ತು. ನಾಯಕರ ಮಗಳು ಕೀರ್ತಿ 'ಅಪ್ಪ, ರಹಮತ್ ಬಂದಿದ್ದಾರೆ' ಎಂದರು. 'ರಾಮತ್ ಬಂದಿದಾರಾ? ನಾನೇನು ಮಾಡಬೇಕು?' ಎಂದು ಗಡಿಬಿಡಿಯಿಂದ ತೊದಲುತ್ತ ಹಾಲಿಗೆ ಬಂದು ಕೂತರು. ಇದ್ದಷ್ಟೂ ಹೊತ್ತು ಅವರು ನನ್ನ ಮುಖ ನೋಡಲೇ ಇಲ್ಲ. ಒಳಗೆ ಜೀವ ಧಗಧಗಿಸುತ್ತಿದೆ ಎಂಬಂತೆ, ಮುನಿಸಿಕೊಂಡ ಮಗುವಿನಂತೆ, ಎದುರುಗೋಡೆಯ ಯಾವುದೊ ಬಿಂದುವಿನತ್ತ ದುರದುರನೆ ದಿಟ್ಟಿಸುತ್ತ ಕೂತರು. ಹೋಗಿ ಬರುತ್ತೇನೆಂದು ಕೈಮುಗಿದರೂ ಸ್ಪಂದನೆಯಿಲ್ಲ. ಮೇಲೆ ಕಡಲಂತೆ ಶಾಂತವಾಗಿ ಕಂಡರೂ ಆಳದಲ್ಲಿ ತಮ್ಮ ಪ್ರತಿಭೆಗೆ ತಕ್ಕ ಮನ್ನಣೆ ಸಿಗಲಿಲ್ಲ ಎಂಬ ನೋವಿನ ಕಹಿ, ಸುಪ್ತಪ್ರಜ್ಞೆಯಲ್ಲಿ ಹೊಯ್ದಾಡುತ್ತ ಉಳಿದುಬಿಟ್ಟಿತೇ? ಹಾಲಿನ ಒಂದು ಮೂಲೆಯ ಸೋಫಾದಲ್ಲಿ ಅವರು ಯಾವಾಗಲೂ ದೇಹವನ್ನು ಚೆಲ್ಲಿಕೊಂಡಂತೆ ಕೂರುತ್ತಿದ್ದರು. ಅದಕ್ಕೆ ಸಮೀಪವಾಗಿ ಇನ್ನೊಂದು ಮೂಲೆಯಲ್ಲಿದ್ದ ಬೆತ್ತದ ಕುರ್ಚಿಯಲ್ಲಿ ನನ್ನಂತಹ ಸಾವಿರಾರು ಜನ ಕೂತು ಅವರನ್ನು ಕೇಳಿಸಿಕೊಳ್ಳುತ್ತಿದ್ದೆವು. ಈ ಜಾಗದಲ್ಲಿ ಎಷ್ಟೊಂದು ಚರ್ಚೆ ಹರಟೆ ಹಾಡು ಹಾಸ್ಯಪ್ರಸಂಗಗಳು ಜರುಗಿದವು! ಈಗ ಅದೇ ಜಾಗದಲ್ಲಿ ಕೂತು ಪಟ ತೆಗೆಸಿಕೊಂಡೆವು. ಅದು ಹಗಲಿನ ಚಂದಿರನಂತೆ ಬಸವಳಿದಿದೆ.

ಒಂಬತ್ತು ದಶಮಾನ ತನ್ನ ದುಡಿಮೆ ಬದ್ಧತೆ ಪ್ರಾಮಾಣಿಕತೆಗಳಿಂದ ಪಾಠಮಾಡಿದ ಮೇಷ್ಟ್ರು, ಬರೆದ ಲೇಖಕ, ಬದುಕಿದ ಸಂಸಾರಿ, ಚಳವಳಿಗಳಲ್ಲಿ ಭಾಗವಹಿಸಿದ ಸಾರ್ವಜನಿಕ ವ್ಯಕ್ತಿ, ಹಲವರ ಬಾಳಿಗೆ ನೈತಿಕ ಬೆಂಬಲ ಒದಗಿಸಿದ 'ನಿಜದನಿ' (1935–2023) ಕಣ್ಮರೆಯಾಯಿತು. 'ನಿಜದನಿ' ಅವರ ಪುಸ್ತಕದ ಹೆಸರೂ ಹೌದು. ಸುದ್ದಿ ಬಂದಾಗ ದೂರ ದೇಶದಲ್ಲಿದ್ದೆ. ದುಗುಡದಿಂದ ಕೃತಜ್ಞತೆಯಿಂದ ಅವರ 'ವಿನಯ ವಿಮರ್ಶೆ' ಎಂಬ ಪುಟ್ಟಲೇಖನ ಓದಿದೆ. ಅದು ತನ್ನ ಬರೆಹ ಮತ್ತು ಬದುಕು ಹೇಗಿರಬೇಕೆಂದು ವ್ಯಕ್ತಿಯೊಬ್ಬ ರಚಿಸಿಕೊಂಡ ಸಂವಿಧಾನದಂತೆ; ಕಲಾಸಂವೇದನೆ ಪ್ರಜಾಪ್ರಭುತ್ವವಾದಿ ವಿಚಾರವಾದಿ ಜಾತ್ಯತೀತ ಮೌಲ್ಯಗಳು ಏಕತ್ರಗೊಂಡಿರುವ ಪ್ರಣಾಳಿಕೆಯಂತೆ; ನಡೆ–ನುಡಿಗಳ ನಡುವೆ ಬಿರುಕಾಗದಂತೆ ಬದುಕಲು ಬಹಳ ಬೆಲೆತೆತ್ತಿರುವ ಆದರ್ಶವಾದಿಯ ಉಯಿಲಿನಂತೆ ತೋರಿತು.



# ಪ್ರತಿ ರಕ್ತದಾನ ಮೂವರಿಗೆ ಮರುಜೀವ

**ಪಿ.ಡಿ.ಐ.ಟಿಯಲ್ಲಿ ಜರುಗಿದ ರಕ್ತದಾನ ಶಿಬಿರದಲ್ಲಿ ಡಾ. ಸೋಮಶೇಖರ ಕಬ್ಬೆರ್ ಹೇಳಿಕೆ | ರಕ್ತದಾನ ಮಾಡಿ ಹೃದಯಾಘಾತವನ್ನು ತಡೆಗಟ್ಟಿ**

**ಹಂಪಿ ಟೈಮ್ಸ್ ಹೊಸಪೇಟೆ**

ರಕ್ತದಾನ ಮಾಡುವುದರಿಂದ ಮನುಷ್ಯನಲ್ಲಿ ಹೃದಯಾಘಾತ ಸಂಭವಿಸುವ ಪ್ರಮಾಣವು ಕಡಿಮೆಯಾಗುತ್ತದೆ. ಇದಲ್ಲದೇ ರಕ್ತದೊತ್ತಡ, ಮಧುಮೇಹ, ಪಾರ್ಶ್ವವಾಯು ಹಾಗೂ ಅಧಿಕ ಕೊಬ್ಬಿನಾಂಶ ಮುಂತಾದ ರೋಗಗಳನ್ನು ತಡೆಗಟ್ಟಬಹುದು ಎಂದು ಸರ್ಕಾರಿ 100 ಹಾಸಿಗೆ ಆಸ್ಪತ್ರೆಯ ವೈದ್ಯರಾದ ಡಾ. ಸೋಮಶೇಖರ ಕಬ್ಬೆರ್ ಅವರು ತಿಳಿಸಿದರು.

ನಗರದ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ವತಿಯಿಂದ ಹಾಗೂ ಯೂತ್ ರೆಡ್ ಕ್ರಾಸ್ ಸಂಸ್ಥೆ, ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ, ಮತ್ತು ಹೆಚ್.ಡಿ.ಎಫ್.ಸಿ.ಬ್ಯಾಂಕ್ ಅವರ ಸಂಯುಕ್ತ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಒಂದು ರಕ್ತದಾನ ಮೂರು ಜೀವಿಗಳನ್ನು ಉಳಿಸುತ್ತದೆ, ಅವುಗಳೆಂದರೆ ಕೆಂಪು ರಕ್ತ ಕಣಗಳು, ಬಿಳಿ ರಕ್ತ ಕಣಗಳು ಮತ್ತು ಪ್ಲಾಸ್ಮಾ. 18 ವರ್ಷ ಮೇಲ್ಪಟ್ಟ




ಹಾಗೂ 60 ವರ್ಷದೊಳಗಿನ 45 ಕೆ.ಜಿ ಗಿಂತಲೂ ಹೆಚ್ಚಿನ ತೂಕವನ್ನು ಹೊಂದಿರುವ ವ್ಯಕ್ತಿಗಳು ರಕ್ತದಾನ ಮಾಡಲು ಅರ್ಹರಾಗಿರುತ್ತಾರೆ. ರಕ್ತ ದಾನ ಮಾಡುವವರ ಹಿಮೋಗ್ಲೋಬಿನ್ ಕನಿಷ್ಟ 12 ಗ್ರಾಂ ಇರಬೇಕು, ಥೈರಾಯ್ಡ್ ಸಮಸ್ಯೆ ಹೃದಯ ಸಂಬಂಧಿ ಖಾಯಿಲೆಗಳು, ಬಿ.ಪಿ, ಶುಗರ್ ಮುಂತಾದ ದೀರ್ಘಕಾಲದ ರೋಗಗಳಿಗೆ ತುತ್ತಾದ ವ್ಯಕ್ತಿಗಳು ರಕ್ತದಾನವನ್ನು ಮಾಡಬಾರದು ಎಂದು ಹೇಳಿದರು. ಭಾರತದಲ್ಲಿ ವಾರ್ಷಿಕವಾಗಿ ಜನಸಂಖ್ಯೆಯ ಶೇಕಡಾ 1% ರಷ್ಟು ರಕ್ತದ ಅವಶ್ಯಕತೆ ಇದೆ. ಈಗಿನ ರಕ್ತದಾನ ಶಿಬಿರಗಳಲ್ಲಿ ಹೆಣ್ಣು ಮಕ್ಕಳ ರಕ್ತದಾನದ ಸಂಖ್ಯೆ ಶೇಕಡಾ 20% ರಷ್ಟು ಏರಿಕೆ ಆಗಿರುವುದು ಸಂತಸದ ಸಂಗತಿ ಎಂದು ಅವರು ಅಭಿಪ್ರಾಯಪಟ್ಟರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಯು.ಎಂ ರೋಹಿತ್ ಮಾತನಾಡಿ, ಪಿಡಿಐಟಿಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಸ್ವಯಂ ಪ್ರೇರಿತವಾಗಿ ರಕ್ತದಾನಮಾಡಲುನೋಂದಾಯಿಸಿಕೊಂಡಿರುವುದು ಶ್ಲಾಘನೀಯ ಎಂದು ಹೇಳಿದರು.

ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ಸಂಯೋಜಕ ಪ್ರೊ. ಬಸವರಾಜ.ಆರ್. ವೀ.ವೀ ಸಂಘ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ನವೀನ್ ಆರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಶಿಬಿರದಲ್ಲಿ ಯೂತ್ ರೆಡ್ ಕ್ರಾಸ್ ಸಂಸ್ಥೆಯ ಸಂಯೋಜಕ ಪ್ರೊ. ಮಂಜುನಾಥ್ ಎಸ್.ಹೆಚ್ ಮತ್ತು ಹೊಸಪೇಟೆಯ ಹೆಚ್.ಡಿ.ಎಫ್.ಸಿ.ಬ್ಯಾಂಕ್ ಮ್ಯಾನೇಜರ್ ಬದ್ರಿಪ್ರಸಾದ್ ಕುಲಕರ್ಣಿ, ಆನಂದ್ ಮತ್ತು ಬ್ಲಡ್ ಬ್ಯಾಂಕ್ ಕಾರ್ಯಕರ್ತರಾದ ಜಗದೀಶ್ ಉಪಸ್ಥಿತರಿದ್ದರು. ಶಿಬಿರದಲ್ಲಿ ಅರ್ಹ ಅರವತ್ತಕ್ಕೂ ಹೆಚ್ಚು ವಿದ್ಯಾರ್ಥಿ,ವಿದ್ಯಾರ್ಥಿನಿಯರು ಹಾಗೂ ಕಾಲೇಜಿನ ಸಿಬ್ಬಂದಿ ವರ್ಗದವರು ರಕ್ತದಾನ ಮಾಡಿದರು. ಹೆಚ್.ಡಿ.ಎಫ್.ಸಿ.ಬ್ಯಾಂಕ್ ವತಿಯಿಂದ ಕಿಟ್ ಮತ್ತು ಪ್ರಮಾಣ ಪತ್ರವನ್ನು ರಕ್ತದಾನಿಗಳಿಗೆ ವಿತರಿಸಲಾಯಿತು.

ಕವಿ ಮನಸು

## ಕಲ್ಲು ಮುಳ್ಳುಗಳ ಹಾದಿ

ಇಲ್ಲಿ ಯಾವುದು ಸಿಗುವುದಿಲ್ಲ ಸುಲಭದಿ
ನಡೆದು ಸಾಗಬೇಕಿದೆ ಕಲ್ಲು ಮುಳ್ಳುಗಳ ಹಾದಿ.
ಜೀವನದ ಸ್ಪರ್ಧೆಯಲ್ಲಿ ಎದುರಾಳಿಯಾಗಿ
ಸಿಗುವರು ಹಲವು ಮಂದಿ.
ನೀ ನಿಂತ ನೀರಲ್ಲ ಅಡೆತಡೆಗಳನ್ನು ಒಡೆದು
ಸಾಗರದತ್ತ ಸಾಗುವ ಮಹಾನದಿ.
ಸೋಲಿಗೆ ಅಂಜಿದರೆ
ಗೆಲುವು ಹೇಗೆ ಬರುವುದು ಸಮೀಪದಿ.
ಪ್ರಯತ್ನವೊಂದೆ ಒಂದೇ ಒಂದು
ಸಾಕು ಸೇರಲು ಜಯದ ಸನ್ನಿಧಿ.

**– ಮಂಜುಶ್ರೀ ಮುರಳೀಧರ್**
ತೋರಣಗಲ್ಲು, ಬಳ್ಳಾರಿ.

## ಹೆಂಗಸರ ಬಾಯಿ ಬಲು ಜೋರು

ಸಹಜವಾಗೇ
ಸಮಾಜದಲ್ಲಿ ಒಂದು ಮಾತು
ಹೆಂಗಸರ ಬಾಯಿ ಜೋರು

ನಿಜ ಹೆಂಗಸರ ಬಾಯಿ ಬಲು ಜೋರು
ಮೆದುವಾಗಿ ಹೇಳಿದಾಗ
ಪರಿ ಪರಿಯಾಗಿ ಬೇಡಿದಾಗ
ಕೇಳದ ಕೆಪ್ಪು ಕಿವಿಗಳಿಗೆ
ಜೋರಾಗಿ ಕೂಗಿ ಹೇಳಿದರೆ ಕೇಳಬಹುದೆಂದು

ನಿಜ..ಹೆಂಗಸರ ಬಾಯಿ ಬಲು ಜೋರು
ಕೈಯೆತ್ತಿ ಮುಖ ಮೂತಿ ನೋಡದೆ
ಚಚ್ಚುವ ಗಂಡನಿರಲು
ಬಾಯಿಗೆ ಸೆರಗಿಕ್ಕಿ ಬಿಕ್ಕಳಿಸದೆ
ಜೋರಾಗಿ ಕಿರುಚಿದರೆ ಕೇಳಬಹುದೆಂದು

ನಿಜ ಹೆಂಗಸರ ಬಾಯಿ ಬಲು ಜೋರು
ತನಗಾಗುವ ನೋವು ಹೇಳಲಾಗದೇ
ಪರರಲ್ಲಿ ಬಿಚ್ಚಿಡಲಾಗದೆ,
ಮಾನಸಿಕವಾಗಿ ಕುಗ್ಗದೆ
ಜೋರಾಗಿ ಅರಚಿದರೆ ಕೇಳಬಹುದೆಂದು

ನಿಜ ಹೆಂಗಸರ ಬಾಯಿ ಬಲು ಜೋರು
ದೈಹಿಕ ಹಲ್ಲೆಗೆ ಒಳಗಾಗುವ
ಆದರೆ ಪ್ರತಿಭಟಿಸಲು ಆಗದ,
ತನ್ನ ವ್ಯಕ್ತಿತ್ವಕ್ಕೆ ಕಳಂಕದ ಮಸಿ ಬಳಿವ
ಗಂಡಸರಿಗೆ ತನ್ನ ಆಕ್ರೋಶ ತೋರಲು
ಗಂಟಲು ಹರಿವಂತೆ ಕಿರುಚಿದರೆ ಕೇಳಬಹುದು ಎಂದು

ನಿಜ ಹೆಂಗಸರ ಬಾಯಿ ಬಲು ಜೋರು
ಹೊಡೆವ ಗಂಡನಿಗೆ ತಿರುಗಿಸಿ
ಬಾರಿಸಲು ಕಲಿಸುವುದು ದೂರ ಬಿಡಿ,
ಎತ್ತಿದ ಗಂಡನ ಕೈಯನು ತಡೆಯಲು ಕೂಡ
ಕಲಿಸದ ನಮ್ಮ ಸಂಸ್ಕೃತಿಗೆ
ಕೂಗಿ ಕೂಗಿ ಹೇಳಿದರೆ ಕೇಳಬಹುದೆಂದು

ನಿಜ ಹೆಂಗಸರ ಬಾಯಿ ಬಲು ಜೋರು

**– ವೀಣಾ ಹೇಮಂತ್ ಗೌಡ ಪಾಟೀಲ್**
ಮುಂಡರಗಿ ಗದಗ

## ತುಂಗಭದ್ರಾ ನೀರಿನ ಮಟ್ಟ



| ಬುಧವಾರ : 06-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1592.21 ಅಡಿ |
| ಒಳ ಹರಿವು | 644 ಕ್ಯುಸೆಕ್ |
| ಹೊರ ಹರಿವು | 2319 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 12.976 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.93 ಅಡಿ |
| ಒಳ ಹರಿವು | 1539 ಕ್ಯುಸೆಕ್ |
| ಹೊರ ಹರಿವು | 5852 ಕ್ಯುಸೆಕ್ |
| ಸಾಮರ್ಥ್ಯ | 90.093 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನಿಮ್ಮ ಮಗು ಊಟ ಮಾಡ್ತಿಲ್ವಾ? ಕಥೆ ಹೇಳಿ...

ಆಹಾರ ಮನುಷ್ಯನ ದೇಹಕ್ಕೆ ಬಹಳ ಮುಖ್ಯ. ಮನುಷ್ಯ ಸದೃಢ ದೇಹ, ಮನಸ್ಸು, ಪರಿಪೂರ್ಣವಾಗಿ ಬೆಳೆಯಲು ನಮಗೆ ಆಹಾರ ಬೇಕೇ ಬೇಕು. ಆಹಾರ ಅಂದ್ರೆ ಕೇವಲ ಅನ್ನ, ಸಾಂಬಾರ್, ಇಡ್ಲಿ, ದೋಸೆ ಇತ್ಯಾದಿ ತಿಂದರೆ ಸಾಕೆ ?ಅಲ್ಲ ಆಹಾರ ಎಂದರೆ ನಮ್ಮ ದೇಹಕ್ಕೆ ಪ್ರೋಟೀನ್, ವಿಟಮಿನ್, ಖನಿಜಗಳು, ಸಮ ಪ್ರಮಾಣದಲ್ಲಿ ಸಮತೋಲನ ಆಹಾರ ಸೇವಿಸಿದರೆ ಮಾತ್ರ ಅದು ಉತ್ತಮ ಆಹಾರ ತಿನ್ನಬಹುದು.

ಕೆಲವರು ತಿನ್ನಕ್ಕಾಗೇನೆ ಬದುಕಿದ್ದೀವಿ ಅನ್ನೋ ತರ ಸಿಕ್ಕ ಸಿಕ್ಕಂಗೆ ತಿಂತಾನೆ ಇರ್ತಾರೆ. ಆದ್ರೆ ಹಾಗೆ ಆಗಬಾರದು ನಾವು ಬದುಕುವುದಕ್ಕಾಗಿ ತಿನ್ನಬೇಕು ಹೊರತು ತಿನ್ನುವುದಕ್ಕಾಗಿನೇ ಬದುಕಬಾರದು. ನಮ್ಮ ಆಹಾರ ಪದ್ಧತಿ, ಸಮತೋಲನ ಆಹಾರ ಪದ್ಧತಿಯಾಗಿರಬೇಕು.

ಈಗಿನ ಮಕ್ಕಳು ಆಹಾರ ಅಂದ್ರೆ ಮೂಗು ಮುರಿತಾರೆ .ಎಲ್ಲಾ ತಾಯಂದಿರಿಗೆ ಮಕ್ಕಳಿಗೆ ಊಟ ತಿನ್ನಿಸುವುದೇ ಹರಸಾಹಸ ಆಗಿಬಿಟ್ಟಿದೆ. ಮಕ್ಕಳಿಗೆ ಹೇಗೋ ಊಟ ತಿನ್ನಿಸಿದರೆ ಸಾಕೆಂದು ಟಿವಿ, ಮೊಬೈಲ್ ಬಳಕೆ ಮಾಡಿಕೊಂಡು, ಅವರಿಗೆ ಕಾರ್ಟೂನ್, ಟಿಕ್ ಟಾಕ್, ಅದು ಇದು ತೋರಿಸಿ ಊಟ ಮಾಡಿಸುತ್ತಾರೆ.ಮಕ್ಕಳಿಗೆ ಊಟ ಹೊಟ್ಟೆಯಲ್ಲಿ ಹೋದ್ರೆ ಸಾಕು ಬಿಡಪ್ಪ ಅಂತ ನೆಮ್ಮದಿ ಉಸಿರು ಬಿಡುತ್ತಾರೆ .ಆದರೆ ಮಕ್ಕಳಿಗೆ ನಮ್ಮ ಅಮ್ಮ ಏನ್ ತಿಳ್ಸಿದ್ರು ಅಂತ ಪರಿಜ್ಞಾನವೇ ಇರುವುದಿಲ್ಲ ಅವರ ಗಮನವೆಲ್ಲ ಟಿವಿ ,ಮೊಬೈಲ್, ಕಡೆ ಇರುತ್ತೆ.

ಹಿಂದಿನ ಕಾಲದಲ್ಲಿ ತಾಯಂದಿರು ಮಕ್ಕಳಿಗೆ ಊಟ ಮಾಡಿಸಲು ಚಂದಮಾಮನನ್ನು ತೋರಿಸಿ, ಇಲ್ಲವೇ ಪ್ರಾಣಿ, ಪಕ್ಷಿಗಳನ್ನ ತೋರಿಸಿ ,ಇಲ್ಲವೇ ರಾಜ ರಾಣಿಯ ಕಥೆಗಳು ಅಥವಾ ನೀತಿಯ ಕಥೆಗಳನ್ನು ಹೇಳಿ "ಮಕ್ಕಳಲ್ಲಿ ಆಲಿಸುವ, ಸಾಮರ್ಥ್ಯ ,ಏಕಾಗ್ರತೆ ,ಕಾಲ್ಪನಿಕ ಸಾಮರ್ಥ್ಯಗಳು ಹೆಚ್ಚಿಸುವಂತೆ ಮಾಡಿ ,ಮಕ್ಕಳಿಗೆ ಹೊಟ್ಟೆ ತುಂಬಾ ಊಟ ಮಾಡಿಸುತ್ತಿದ್ದರು. ಜೊತೆಗೆ ಇದು ನಿನ್ನ ತುತ್ತು ,ಇದು ಅಪ್ಪಂದು ,ಇದು ಅಮ್ಮಂದು ಅಕ್ಕ, ಅಣ್ಣ ,ತಾತ ,ಅಜ್ಜಿ, ಅಂತ ತುತ್ತುಗಳನ್ನು ಮಾಡಿ, ಕುಟುಂಬದ ಸಾಮರಸ್ಯವನ್ನು ಬೆಸೆದು ,,ನೀನು ಈ ತುತ್ತು ತಿಂದಿಲ್ಲ ಅಂದ್ರೆ ಅವರ ಮೇಲೆ ನಿನಗೆ ಪ್ರೀತಿ ಇಲ್ಲ ಅಂತ ,ಹೇಳಿ "ಮಕ್ಕಳಿಗೆ ಕುಟುಂಬ ಸದಸ್ಯರ ಪ್ರೀತಿ ಬೆಸೆಯುವಂತೆ ಮಾಡಿ ಊಟ ಮಾಡಿಸುತ್ತಿದ್ದರು".

ಹೌದು ನಾನು ಇಷ್ಟುದ್ದ ಹೇಳಿದ್ನಲ್ಲ ಈಗ ನಮ್ಮನೆ ಕಥೆ ಹೇಳ್ತಿನಿ ಕೇಳಿ. ನನ್ನ ಮಗಳು ಗಎಲು ಕ್ಲಾಸ್ ಅವಳಿಗೆ ದಿನಾಲು ಊಟ ಮಾಡಿಸಬೇಕು ಅಂದ್ರೆ ನನಗೆ ದೊಡ್ಡ ತಲೆನೋವು... ಯಾಕೆ ಅಂತೀರಾ? ಅವಳಿಗೆ ಒಂದು ಒಪ್ಪತ್ತು ಊಟ ಮಾಡಿಸಬೇಕು ಅಂದ್ರೆ ಮೂರು ತಾಸಿನ ಸಿನಿಮಾ ನೋಡ್ಕೊಂಡು ಆರಾಮಾಗಿ ಬರ್ಬೋದು ನೋಡಿ. ಅಂದ್ರೆ ಅಷ್ಟು ನಿಧಾನವಾಗಿ ಊಟ ಮಾಡ್ತಾಳೆ, ಊಟ ಮಾಡಲ್ಲ, ಊಟವನ್ನು ಬಾಯಲ್ಲಿ ಈ ಕೋತಿಗಳು ಆಹಾರವನ್ನ ದವಡೆಯಲ್ಲಿ ಶೇಖರಣೆ ಮಾಡಿಕೊಂಡು ತಿಂತಾವೆ ನೋಡಿ, ಹಾಗೆ ನನ್ನ ಮಗಳು ಊಟವನ್ನ ಬಾಯಿಯ ದವಡೆಯಲ್ಲಿ ಸಂಗ್ರಹಿಸಿಕೊಂಡು, ಅದನ್ನ ಒಳಗಡೆ ನುಂಗಲ್ಲ, ಬಾಯಿಯಲ್ಲೂ ಹಾಗಿರುವುದಿಲ್ಲ, ಹಾಗೆ ಇಟ್ಟುಕೊಂಡು ಕೂಡ್ತಾಳೆ. ಇದು ನನ್ನ ಮಗಳ ಊಟದ ಲಕ್ಷಣ. ನನಗೂ ದಿನಾಲು ನೋಡಿ,,, ನೋಡಿ ತಲೆ ಕೆಟ್ಟು "ತಾಯಂದಿರ ಹಳೆ ಪದ್ಧತಿ ಅನುಸರಿಸಿದೆ, ಅದೇ ನಾನು ಹಾಗೆ ಹೇಳಿದ್ನಲ್ಲ ಮಕ್ಕಳಿಗೆ ಕಥೆ ಹೇಳಿ ಊಟ ಮಾಡಿಸುವುದನ್ನ ಅನುಸರಿಸಿದೆ".

ಒಂದು ದಿನ ಭಾನುವಾರ ಅವಳ ಎದುರಿಗೆ ಊಟ ಮಾಡಿಸಲು ಕುಂತೆ. ಮಗಳೇ ನಾನು ನಿನಗೆ ಇವತ್ತು ಒಳ್ಳೆಯದೊಂದು ಕಥೆ ಹೇಳ್ಳ ಅಂದೆ... ಅವಳು ಬಹಳ ಖುಷಿಯಿಂದ ಹುಂ...ಅಂತ ಒಪ್ಪಿಕೊಂಡಳು. ಹಾಗಾದ್ರೆ ನಾನು ಕಥೆ ಹೇಳಬೇಕಂದ್ರೆ, ನೀನು ಊಟ ಮಾಡಬೇಕು ಅಂದೆ. ಅದಕ್ಕೂ ಅವಳು ಒಪ್ಪಿದಳು . "ಅಬ್ಬಾ ಕುರಿ ಹಳ್ಳಕ್ಕೆ ಬಿತ್ತು,"ಅಂತ ಅನ್ಕೊಂಡು ಕಥೆ ಹೇಳಲು ಪ್ರಾರಂಭಿಸಿದೆ.







**ತ್ರಿವೇಣಿ ಕುಮಾರಿ ಬಿ ಎಂ**
**ಹೊಸಪೇಟೆ.**

ಒಂದು ದಿನ ಅಕ್ಕಿ, ರಾಗಿ, ಗೋಧಿ ಜೋಳ, ಹೀಗೆ ಅನೇಕ ಧಾನ್ಯಗಳೆಲ್ಲ ಸೇರಿ ಒಮ್ಮೆ ಮೀಟಿಂಗ್ ಮಾಡ್ತಿದ್ದವು. ಆಗ ಅವುಗಳಲ್ಲಿ ನಾನೇ ಹೆಚ್ಚು, ನಾನೇ ಶ್ರೇಷ್ಠ, ಜನ ನನ್ನನ್ನೇ ಜಾಸ್ತಿ ಉಪಯೋಗಿಸ್ತಾರೆ. ಅಂತ ಒಂದಕ್ಕೊಂದು ವಾದ ವಿವಾದವಾಗಿ ಜಗಳ ಪ್ರಾರಂಭವಾಯಿತು.

**ಅಕ್ಕಿ:** ನಾನು ಬಹಳ ಪರಿಶುದ್ಧವಾಗಿದ್ದೇನೆ. ನನ್ನ ಬಣ್ಣ ನೋಡಿನೇ ಎಲ್ಲರೂ ನನ್ನನ್ನ ಇಷ್ಟ ಪಡ್ತಾರೆ. ನಾನು ಜಾಸ್ತಿ "ಶ್ರೀಮಂತರ ಮನೆಯಲ್ಲಿ ಇರೋದು ನನ್ನ ಲೆವೆಲ್ಲೇ ದೊಡ್ಡಮಟ್ಟದ್ದು "ಎಂದಿತು.

**ಗೋಧಿ:** ನಾನು ಅನೇಕ ರುಚಿಕರವಾದ ಅಡಿಗೆಗೆ ಚಪಾತಿ, ಪಾಯಸಕ್ಕೆ ನನ್ನನ್ನ ಬಳಸುತ್ತಾರೆ ನಾನು ಕೂಡ ಹೆಚ್ಚು ಕಡಿಮೆ ಶ್ರೀಮಂತರ ಮನೆಯಲ್ಲಿ ಇರೋದು ಎಂದಿತು.

"ಅಯ್ಯೋ ರಾಗಿಯೇ ನಿನ್ನಿಂದ ಯಾರಿಗೂ ಉಪಯೋಗ ಇಲ್ಲ. ನಿನ್ನ ಬಣ್ಣ ನೋಡಿ, ನಿನ್ನನ್ನ ಜಾಸ್ತಿ ಜನ ಇಷ್ಟ ಪಡೋದೇ ಇಲ್ಲ .ನೀನು ಬರೀ ಬಡವರ ಮನೆಯಲ್ಲಿ ಕಾಣ್ತೆಯ. ನೀನು ನಮ್ಮೆಲ್ಲ ಧಾನ್ಯಗಳಲ್ಲಿ ಬಹಳ ಕೆಳಮಟ್ಟದಲ್ಲಿದಿಯಾ ಎಂದು ಎಲ್ಲಾ ಧಾನ್ಯಗಳು ರಾಗಿಯನ್ನ ತೆಗಳಿ ಹೀಯಾಳಿಸಿದವು".

ರಾಗಿಗೆ ಬಹಳ ಬೇಜಾರಾಗಿ ,"ಅಯ್ಯೋ ತಡ್ರಪ್ಪ, ನನಗೂ ಮಾತಾಡಲಿಕ್ಕೆ ಕೊಡ್ರಿ, ನಾನು ನೋಡೋದಕ್ಕೆ ಕಪ್ಪಾಗಿದ್ದೀನಿ ನಿಜ .ನನ್ನನ್ನು ಜಾಸ್ತಿ ಬಡವರ ಮನೆಯಲ್ಲಿ ಕಾಣ್ತೀನಿ ನಿಜ .ಆದ್ರೆ ನನ್ನಲ್ಲಿ ಎಷ್ಟೊಂದು ಪ್ರೋಟೀನ್, ಫೈಬರ್ ,ಕ್ಯಾಲ್ಸಿಯಂ ,ಕಬ್ಬಿಣ, ಮತ್ತು ಇತರ ಪ್ರಮುಖ ಖನಿಜಗಳು , ವಿಟಮಿನ್ಗಳು ಸಮೃದ್ಧವಾಗಿ ತುಂಬಿದೆ ."ಅಂತ ನಿಮಗೆ ಗೊತ್ತೇ..? ವಿಶೇಷವಾಗಿ ಚಿಕ್ಕ ಮಕ್ಕಳಿಗೆ ಊಟ ಪ್ರಾರಂಭಿಸುವ ಮೊದಲು ನನ್ನ ಆಹಾರವನ್ನೇ ಕೊಡೋದು, ರಾಗಿ ಮಾಲ್ಟ್ ,ರಾಗಿ ಹಂಬಲಿ, ಇದು ಮಕ್ಕಳ ಬೆಳವಣಿಗೆಗೆ ಹೆಚ್ಚು ಪರಿಣಾಮಕಾರಿ. ಅಷ್ಟೇ ಅಲ್ಲ ಮಕ್ಕಳಿಂದ ಹಿಡಿದು ವಯಸಾದವರು ಕೂಡ ನನ್ನನ್ನು ಆಹಾರ ಪದ್ಧತಿಯಲ್ಲಿ ಬಳಸಿದ್ರೆ.. ಅವರ ಆರೋಗ್ಯ ಸಮೃದ್ಧಿಯಾಗಿರುತ್ತದೆ. ನಿಮ್ಮನ್ನ ಹೆಚ್ಚಾಗಿ ಆಹಾರ ಪದ್ಧತಿಯಲ್ಲಿ ಬಳಸಿದ್ರೆ ಬಿಪಿ, ಶುಗರ್, ಮಧುಮೇಹ, ಇತ್ಯಾದಿ ಕಾಯಿಲೆಗಳನ್ನ ಬರ ಮಾಡಿಕೊಳ್ಳಬೇಕಾಗುತ್ತದೆ.. ಆದರೆ ನನ್ನನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿದಷ್ಟು ಅವರು ಆರೋಗ್ಯವಂತರಾಗಿ ಬಾಳ್ತಾರೆ" ಎಂದಿತು.

ಗೋಧಿ: ಯಾಕ್ರಪ್ಪಾ ನಮ್ಮ ನಮ್ಮಲ್ಲೇ ವಾದಗಳು, ನಮ್ಮಲ್ಲಿ ಯಾರು ಶ್ರೇಷ್ಠರು? ಎಂದು ಮನುಷ್ಯರ ಬಳಿ ಉತ್ತರ... ಇದೆ ಕೇಳೋಣವ? ಎಂದಿತು. ಎಲ್ಲಾ ಧಾನ್ಯಗಳು ಅದಕ್ಕೆ ಒಪ್ಪಿದವು.

ಮೊದಲು ಶ್ರೀಮಂತರ ಮನೆಗೆ ಹೋದವು... ಶ್ರೀಮಂತರೇ ನೀವು ಜಾಸ್ತಿ ಯಾವ ಧಾನ್ಯವನ್ನು ನಿಮ್ಮ ಮನೆಯಲ್ಲಿ ಉಪಯೋಗಿಸುವುದು? ಎಂದವು... ನಮ್ಮನೇಲಿ ಅಕ್ಕಿಯನ್ನೇ ಜಾಸ್ತಿ ಬಳಸುವುದು. ಅಕ್ಕಿಯಲ್ಲಿ ಬಾಸುಮತಿ ಅಕ್ಕಿ, ಜೀರಾ ಅಕ್ಕಿ ಹೀಗೆ ನಾನಾ ತರದ ಅಕ್ಕಿಯಿಂದ ಪಲಾವ್ ,ಬಿರಿಯಾನಿ, ಬಿಸಿಬೇಳೆ ಬಾತ್, ಹೀಗೆ ನಾನಾ ತರದ ಊಟ ತಿಂಡಿಗಳನ್ನು ಮಾಡ್ತೀವಿ.... ಹೌದಾ.... ಹಾಗಾದ್ರೆ ನಿಮ್ಮ ಆರೋಗ್ಯ ಹೇಗಿದೆ?

"ಅಯ್ಯೋ ನಮ್ಮ ಆರೋಗ್ಯ ಏನ್ ಕೇಳ್ತೀರಾ ಬಿಡಿ. ನನಗೆ ಬಿಪಿ ಇದೆ ,ನನ್ನ ಹೆಂಡ್ತಿಗೆ ಶುಗರ್ ಇದೆ, ನನ್ನ ಮಕ್ಕಳಿಗೆ ಬೊಜ್ಜು ಹೊಟ್ಟೆ ತುಂಬಿದವೆ ಅಂತ ಕಾಯಿಲೆಗಳ ಪಟ್ಟಿಯನ್ನೇ ಹೆಸರಿಸಿದ್ರು"....

ನಂತರ ಎಲ್ಲಾ ಧಾನ್ಯಗಳು ಬಡವರ ಮನೆಗೆ ಬಂದ್ರು. ಅಯ್ಯಾ... ನಿಮ್ಮ ಮನೆಯಲ್ಲಿ ಜಾಸ್ತಿ ಯಾವ ಧಾನ್ಯಗಳನ್ನ ಬಳಸುವುದು? ಎಂದು ಕೇಳಿದವು. "ಬಡವರು ನಮ್ಮನೆಯಲ್ಲಿ ದಿನಾ ನಿತ್ಯ ಊಟಕ್ಕೆ" ರಾಗಿ ಮುದ್ದೆಯನ್ನೇ" ಮಾಡೋದು ಎಂದರು.

ಮತ್ತೆ ನಿಮ್ಮ ಆರೋಗ್ಯ ಹೇಗಿದೆ? ಎಂದು ರಾಗಿ ಕೇಳಿತು.

ನಮ್ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿದ್ದೇವೆ. ಯಾರಿಗೂ ಬಿಪಿ, ಶುಗರ್, ಯಾವ ಕಾಯಿಲೆಗಳು ಪಾದರ್ಪಣ ಮಾಡಿಲಪ್ಪ. ನಮ್ಮ ಅಜ್ಜ, ಮುತ್ತಜ್ಜ, ಅವರೆಲ್ಲ ನೂರು ವರ್ಷದವರೆಗೂ ಯಾವ ಕಾಯಿಲೆ ಇಲ್ಲದೆ ಗಟ್ಟಿಮುಟ್ಟಾಗಿ ಬಾಳಿ ಬದುಕಿ ಹೋಗಿದ್ದಾರೆ."ಹಿಟ್ಟಂ ತಿಂದಂ ಬೆಟ್ಟಂ ಎತ್ತಿಟ್ಟಂ ",ಎಂಬ ಗಾದೆ ಮಾತಿನಂತೆ ಬದುಕಿದ್ದಾರೆ" ಎಂದರು.

ಇದನ್ನ ಕೇಳಿದ ಎಲ್ಲ ಧಾನ್ಯಗಳಿಗೆ ಮುಖಭಂಗವಾಗಿ," ಹೌದು ನಮ್ಮೆಲ್ಲ ಧಾನ್ಯಗಳಲ್ಲಿ "ರಾಗಿನೆ" ಶ್ರೇಷ್ಠ ಎಂದು ಒಪ್ಪಿಕೊಂಡವು. ನಾವೆಲ್ಲರೂ ನಿನ್ನನ್ನ ಅರ್ಥಮಾಡಿಕೊಳ್ಳದೆ ,ನಿನ್ನನ್ನ ತೆಗಲಿದ್ದೀವಿ. ನಿನ್ನ ಮಹಿಮೆ ಅಪಾರವಾಗಿದೆ .ನಮ್ಮ ಎಲ್ಲಾ ಧಾನ್ಯಗಳಲ್ಲಿ ನೀನೇ ಉತ್ತಮ, ಶ್ರೇಷ್ಠ ಎಂದು . ಎಲ್ಲಾ ಧಾನ್ಯಗಳು ರಾಗಿಗೆ ಜೈಕಾರ ಕೂಗಿದವು." ಇಲ್ಲಿಗೆ ಕಥೆ ಮುಗೀತು. ನನ್ನ ಮಗಳು ಕಥೆ ಕೇಳ್ತಾ ಕೇಳ್ತಾ ತಟ್ಟೆಯಲ್ಲಿದ್ದ ಒಂದು ರಾಗಿ ಮುದ್ದೆಯನ್ನೇ ಕಾಲಿ ಮಾಡಿದ್ದಳು. ಅವಳು "ಅಮ್ಮ ನನಗೂ ದಿನಾಲು ರಾಗಿಧಾನ್ಯದ ಆಹಾರ ಕೊಡಮ್ಮ" ಎಂದು ಕೇಳಿದಳು... ತಗಳಪ್ಪ ನನ್ನ ಮಗಳ ಮಾತು ಕೇಳಿ ನನಗೆ ಫುಲ್ ಖುಷಿಯಾಯಿತು... ಅವತ್ತಿನಿಂದ ಅವಳಿಗೆ ದಿನಾಲು ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿದೆ.ಅವಳಿಗಾಗಿ ದಿನಕ್ಕೊಂದು ರಾಗಿಯ ಅಡುಗೆಗಳಾದ ರಾಗಿ ಮುದ್ದೆ ,ರಾಗಿ ರೊಟ್ಟಿ, ರಾಗಿ ದೋಸೆ, ರಾಗಿ ಅಂಬಲಿ, ರಾಗಿ ಲಡ್ಡು,.... ಹೀಗೆ.... ನಾನಾ ತರದ ಆರೋಗ್ಯಕರ ಆಹಾರ ತಯಾರಿಸಿ "ದಿನಕೊಂದು ಕಥೆ" ಹೇಳ್ತಾ ಊಟ ಮಾಡುತ್ತಿದ್ದೀನಿ.

ನೋಡಿ ಮೊದಲು ನಾವು ಬದಲಾಗಬೇಕು ಮತ್ತು ನಮ್ಮ ಆಹಾರ ಪದ್ಧತಿಯಲ್ಲಿ ಆಹಾರ ಬದಲಾವಣೆ ಆಗಬೇಕು "ಜಂಕ್ ಫುಡ್ಗಳ "ಹಾವಳಿಯನ್ನು ತಡೆಗಟ್ಟಬೇಕು. ನಾವು ಸಮತೋಲನ ಆಹಾರ ಪದ್ಧತಿಯನ್ನು ಮಾಡಿಕೊಂಡಾಗ, ಮಾತ್ರ ನಮ್ಮ ಮುಂದಿನ ಪೀಳಿಗೆಗಳು ಆರೋಗ್ಯವಂತರಾಗಿ ಬಾಳುತ್ತಾರೆ.......

"ನಿಮ್ಮ ಮಗು ಊಟ ಮಾಡ್ಬೇಕಾ?..... ಹಾಗಾದರೆ ಈ ರೀತಿ ಕಥೆಗಳನ್ನ, ನಿಮ್ಮ ಮಕ್ಕಳಿಗೆ ಹೇಳ್ತಿರಲ್ಲ".......

# ಡಿಪ್ಲೋಮಾ ಇನ್‌ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ: ಅರ್ಜಿಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್‌ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಕಲಬುರಗಿ ವತಿಯಿಂದ ಡಿಪ್ಲೋಮಾ ಇನ್‌ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಕಲಬುರಗಿಯಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್‌ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ ಸಂಸ್ಥೆ ನಡೆಸುತ್ತಿದ್ದು, ಈ ತರಬೇತಿ ಸಂಸ್ಥೆಯ ಮೂಲಕ ಸಹಕಾರ ಸಂಘ ಸಂಸ್ಥೆ, ಸಹಕಾರ ಇಲಾಖೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಗೆ ಆರು ತಿಂಗಳ (180 ದಿನಗಳ) ಅವಧಿಯಡಿಪ್ಲೋಮಾ ಇನ್‌ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು ಜನವರಿ–2024 ರಿಂದ ಆರಂಭಿಸಲಾಗುತ್ತಿದೆ.

ತರಬೇತಿ ಪಡೆಯಲಿಚ್ಛೀಸುವ ಅಭ್ಯರ್ಥಿಗಳು ಸಹಕಾರ ಸಂಘ, ಸಹಕಾರ ಇಲಾಖೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ವೇತನ ಪಡೆಯುವ ನೌಕರನಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೆ ನಿಯಮಿತವಾಗಿ ಅವಕಾಶವನ್ನು ಕಲ್ಪಿಸಲಾಗಿದೆ. ವಯೋಮಿತಿ 16 ವರ್ಷ ದಾಟಿದವರಾಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಶೇ. 18 ರಷ್ಟು ಸ್ಥಾನಗಳನ್ನು ತರಬೇತಿಗಾಗಿ ಮೀಸಲಿರಿಸಲಾಗಿದೆ. ಅಭ್ಯರ್ಥಿಗಳು ಕನಿಷ್ಠ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಸಹಕಾರ ಸಂಘಗಳಲ್ಲಿ ಒಂದು ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯೂ ಸಹ ತರಬೇತಿ ಪಡೆಯಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳಿಗೆ ಮಾಹೆಯಾನ 500 ರೂ.ಗಳ ಶಿಷ್ಯವೇತನವನ್ನು ನೀಡಲಾಗುವುದು.

ನಿರುದ್ಯೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಆರು ತಿಂಗಳ ವಿಶೇಷ ಡಿಪ್ಲೋಮಾ ಇನ್‌ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ನೀಡಲಾಗುವುದು. ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಪಟ್ಟಿಯನ್ನು ಆಯಾಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರ ಮೂಲಕ ಅಥವಾ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಸಹಕಾರಕೇಂದ್ರ ಬ್ಯಾಂಕ್‌ಇವರ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ವಯೋಮಿತಿ 16 ವರ್ಷಗಳಾಗಿರಬೇಕು. ಗರಿಷ್ಠ 30 ವರ್ಷಗಳು ಮೀರಿರಬಾರದು. ಈ ವರ್ಗಕ್ಕೆ ಮಾಹೆಯಾನ 600 ರೂ.ಗಳ ಶಿಷ್ಯವೇತನವನ್ನು ನೀಡಲಾಗುವುದು.

ಡಿ.ಸಿ.ಎಂ ತರಬೇತಿಯ ಅರ್ಜಿ ಫಾರಂ ಮತ್ತು ವಿವರಣಾ ಪುಸ್ತಕವನ್ನು ಕಲಬುರಗಿ ತರಬೇತಿ ಸಂಸ್ಥೆಯಿಂದ ಹಾಗೂ ತರಬೇತಿ ಸಂಸ್ಥೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಸಹಕಾರ ಯುನಿಯನ್ (ಬೀದರ, ಕಲಬುರಗಿ, ರಾಯಚೂರು, ಕೊಪ್ಪಳ ಮತ್ತು ಹೊಸಪೇಟೆ)ಗಳಲ್ಲಿ ಪಡೆಯಬಹುದು. ಅರ್ಜಿಯನ್ನು ಭರ್ತಿ ಮಾಡಿ ಡಿ.30 ರೊಳಗಾಗಿ ಕಲಬುರಗಿ ತರಬೇತಿ ಸಂಸ್ಥೆಯಲ್ಲಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಪ್ರಾಶುಂಪಾಲರು, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್‌ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಆದರ್ಶನಗರ, ಪ್ರಗತಿ ಕಾಲೋನಿ, ಸೇಡಂರಸ್ತೆ ಕಲಬುರಗಿ–585105, ದೂರವಾಣಿ ಸಂಖ್ಯೆ 08472–245340, ಮೊ.ಸಂ: 9916726886, 9742307153, 9113916753 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

## ವೈ.ಜಗದೀಶ್ ನಿಧನ



**ಹೊಸಪೇಟೆ:** ವೀರಶೈವ ಲಿಂಗಾಯತ ಸಮಾಜದ ಹಿರಿಯರು, ಕೆಇಬಿ ನಿವೃತ್ತ ನೌಕರರು ವೈ. ಜಗದೀಶ್ (63) ಇವರು ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರ ಅಂತ್ಯಕ್ರಿಯೆ ಬುಧವಾರ ನಗರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರಿಗೆ ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಮತ್ತು ಅಪಾರ ಬಂಧು ಬಳಗವಿದೆ.

## ದುರ್ಗಮ್ಮ ದೇವಸ್ಥಾನ ವೃತ್ತದಲ್ಲಿ ಕಾಮಗಾರಿ: ಪರ್ಯಾಯ ಮಾರ್ಗದಲ್ಲಿ ಸಂಚರಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ :** ನಗರದ ದುರ್ಗಮ್ಮ ದೇವಸ್ಥಾನದ ವೃತ್ತ ಹತ್ತಿರ ರಸ್ತೆ ಕಾಮಗಾರಿ ನಡೆಯತ್ತಿರುವುದರಿಂದ ಕಾಮಗಾರಿ ಮುಗಿಯುವವರೆಗೆ, ಸಾರ್ವಜನಿಕರು ತಾತ್ಕಾಲಿಕವಾಗಿ ಪರ್ಯಾಯ ಮಾರ್ಗದಲ್ಲಿ ಸಂಚರಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು ಅವರು ಕೋರಿದ್ದಾರೆ.

ಮಾರ್ಗ ಬದಲಾವಣೆ ಮಾಹಿತಿ: ಸಿರುಗುಪ್ಪ ರಸ್ತೆ, ಎಸ್.ಪಿ.ಸರ್ಕಲ್ ಮುಖಾಂತರ ಬಳ್ಳಾರಿ ನಗರಕ್ಕೆ ಪ್ರವೇಶಿಸುವ ಎಲ್ಲಾ ತರಹದ ಭಾರಿ ಸರಕು ವಾಹನಗಳು ಅಂಬೇಡ್ಕರ್ ಮೋತಿ ಸರ್ಕಲ್ ಮುಖಾಂತರ ಸಂಚರಿಸಬೇಕು. ಎಸ್.ಪಿ.ಸರ್ಕಲ್ ಮುಖಾಂತರ ನಗರದೊಳಗೆ ಪ್ರವೇಶಿಸುವ ಕಾರ್ ಹಾಗೂ ದ್ವಿ ಚಕ್ರ ವಾಹನಗಳು ತಾಳೂರು ರಸ್ತೆ, ಕೇನಾಲ್ ರಸ್ತೆ, ಕೆ.ಇ.ಬಿ ಸರ್ಕಲ್ ಮೂಲಕ ನಗರದೊಳಗೆ ಪ್ರವೇಶಿಸಬಹುದು. ಮೋಕ ರಸ್ತೆಯ ಕಡೆಯಿಂದ ಬರುವ ಭಾರಿ ಸರಕು ವಾಹನಗಳು ಕೇವಲ ರಾತ್ರಿ 11 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಕೆ.ಇ.ಬಿ ಸರ್ಕಲ್, ಎಸ್.ಎನ್.ಪೇಟೆ ಫ್ಲೈಓವರ್, ಸಂಗಮ್ ಸರ್ಕಲ್, ರಾಯಲ್, ಮೋತಿ ಸರ್ಕಲ್ ಮುಖಾಂತರ ಸಿರುಗುಪ್ಪ ಮತ್ತು ಹೊಸಪೇಟೆ ರಸ್ತೆ ಕಡೆಗೆ ಸಂಚರಿಸಬೇಕು. ಮೋಕ ರಸ್ತೆಯ ಕಡೆಯಿಂದ ಬಳ್ಳಾರಿ ನಗರಕ್ಕೆ ಬರುವ ಎಲ್ಲಾ ಲಘು ವಾಹನ ಹಾಗೂ ಮೋಟಾರ್ ಸೈಕಲ್‌ಗಳು, ಕೆ.ಇ.ಬಿ ಸರ್ಕಲ್, ಗಾಂಧಿನಗರ ಮಾರ್ಕೆಟ್, ಅಲ್ಲಂ ಸುಮಂಗಳಮ್ಮ ಮಹಿಳಾ ಕಾಲೇಜ್ ಮುಖಾಂತರ ನಗರದಲ್ಲಿ ಸಂಚರಿಸಬೇಕು.

ಮೈಕ್ರೋ ನ್ಯೂಸ್

## ಸಂವಿಧಾನ ಶಿಲ್ಪಿಗೆ ಗೌರವ ಸಮರ್ಪಣೆ



**ಹಂಪಿ ಟೈಮ್ಸ್ ಹೊಸಪೇಟೆ**
ಸಂವಿಧಾನ ಶಿಲ್ಪಿ, ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ 67ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಬುಧವಾರ ಅಂಬೇಡ್ಕರ್ ವೃತ್ತದಲ್ಲಿ ಪುಷ್ಪಾರ್ಚನೆ ಮೂಲಕ ಬಾಬಾ ಸಾಹೇಬ್‌ರವರಿಗೆ ಗೌರವ ಸಮರ್ಪಿಸಲಾಯಿತು.
ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಹಾಗೂ ಇತರಗಣ್ಯರು ಸೇರಿಡಾ. ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.
ಈ ಸಂದರ್ಭದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಂಜುನಾಥ ಹೆಚ್.ವಿ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಗೂ ಇತರೆ ಸಂಘ-ಸಂಸ್ಥೆಗಳ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

## ಹೆಚ್ಚುವರಿ ಮೇವು ಮಾರಾಟಕ್ಕೆ ರೈತರಿಗೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ತಾಲ್ಲೂಕಿನ ರೈತರು ತಮ್ಮಲ್ಲಿ ಇರುವ ಹೆಚ್ಚುವರಿ ಮೇವನ್ನು ಸರ್ಕಾರಕ್ಕೆ ಮಾರಾಟ ಮಾಡಲು ಅವಕಾಶ ಕಲ್ಪಿಸಿದೆ ಎಂದು ಹೊಸಪೇಟೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಸಹಾಯಕ ನಿರ್ದೇಶಕರು ಹಾಗೂ ತಾಲ್ಲೂಕು ಬರಗಾಲ ಟಾಸ್ಕ್‌ಪೋರ್ಸ್ ಸಮಿತಿ ಸದಸ್ಯ ಡಾ. ಬಸವರಾಜ ಬೆಣ್ಣೆ ತಿಳಿಸಿದ್ದಾರೆ.
2023-24ನೇ ಸಾಲಿನಲ್ಲಿ ವಿಜಯನಗರ ಜಿಲ್ಲೆಯ ಹೊಸಪೇಟೆಯು ಬರಪೀಡಿತ ತಾಲ್ಲೂಕು ಎಂದು ಘೋಷಣೆಯಾಗಿರುತ್ತದೆ. ಹೊಸಪೇಟೆ ತಾಲ್ಲೂಕಿನಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿರುವುದರಿಂದ ತಾಲ್ಲೂಕಿನ ರೈತರು ತಮ್ಮ ಬಳಿ ಇರುವ ಹೆಚ್ಚುವರಿ ಮೇವನ್ನು ಸರ್ಕಾರಕ್ಕೆ ಮಾರಾಟ ಮಾಡಲು ಬಯಸಿದ್ದಲ್ಲಿ ಮಾರಾಟ ಮಾಡಬಹುದಾದ ಮೇವಿನ ಲಭ್ಯತೆ, ದರಪಟ್ಟಿ ಹಾಗೂ ವಿಧದ ವಿವರಗಳನ್ನು ಪಶುಪಾಲನಾ ಮತ್ತು ಪಶುವೈದ್ಯಕಿಯ ಸೇವಾ ಇಲಾಖೆ, ಪಶು ಆಸ್ಪತ್ರೆ, ಹೊಸಪೇಟೆ ಇಲ್ಲಿಗೆ 15 ದಿನಗಳೊಳಗೆ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು ಎಂದು ತಿಳಿಸಿದೆ.

## ಸವಿತಾ ಸಮಾಜದ ಪದಾಧಿಕಾರಿಗಳ ಆಯ್ಕೆ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಮರಿಯಮ್ಮನಹಳ್ಳಿಯ ಸವಿತಾ ಸಮಾಜದ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಸವಿತಾ ಸಮಾಜದ ವಾರ್ಷಿಕ ಮಹಾಸಭೆಯಲ್ಲಿ 2023-24ನೇ ಸಾಲಿನ ಸವಿತಾ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.
ಗೌರಾಧ್ಯಕ್ಷರಾಗಿ ಕೆ. ನಾಗೇಶ್, ಅಧ್ಯಕ್ಷರಾಗಿ ಸಿ.ಕೆ. ರಾಮುಡು, ಉಪಾಧ್ಯಕ್ಷರಾಗಿ ಪಿ.ಎಲ್. ರಾಘವೇಂದ್ರ, ಕಾರ್ಯದರ್ಶಿಯಾಗಿ ಎನ್. ಪ್ರದೀಪ, ಖಜಾಂಚಿಯಾಗಿ ಕೆ. ವಿನೋದ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆ. ಗುಂಡಾ ಗೋವಿಂದ, ಕುಲುಮಾಲ ರಾಘವೇಂದ್ರ, ಪಿ. ಗೋವಿಂದ, ನಾಗರಾಜ ಕಂಪ್ಲಿ, ಪಿ. ಶ್ರೀನಿವಾಸ, ಗುಂಡಾ ರಾಜೇಶ್ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಮರಿಯಮ್ಮನಹಳ್ಳಿ ಜನತೆ ಕುಡಿವ ನೀರಿಗಾಗಿ ಹೈರಾಣ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಪಟ್ಟಣಕ್ಕೆ ಎರಡು ತಿಂಗಳು ಕುಡಿವ ನೀರಿನ ಕಂಟಕ. ತುಂಗಭದ್ರಾ ಜಲಾಶಯದಿಂದ ನೀರು ಪೂರೈಸುವ ಬಹುಗ್ರಾಮ ಕುಡಿವ ನೀರಿನ ಯೋಜನೆಯ ಸ್ಥಳದಲ್ಲಿ ಕಾಲುವೆ ದುರಸ್ತಿ ಕಾಮಗಾರಿ ನಡೆಯುತ್ತಿದ್ದು ಇದರಿಂದ 2 ತಿಂಗಳು ಜೀವಜಲದ ತಾಪಾತ್ರಯ ಪಟ್ಟಣದ ಜನತೆ ಎದುರಿಸ ಬೇಕಿದೆ. ಬಹುಗ್ರಾಮ ಕುಡಿವ ನೀರಿನ ಯೋಜನೆಯಿಂದ ಪಟ್ಟಣ ಸೇರಿ 7 ಗ್ರಾಮಗಳಿಗೆ ನೀರು ಪೂರೈಸುವ ಈ ಯೋಜನೆಗೆ ಬಸವ ಕಾಲುವೆಯಿಂದ ಹನುಮನಹಳ್ಳಿ ಶುದ್ದೀಕರಣಕ್ಕೆ ಪೂರೈಕೆಯಾಗಿ ಅಲ್ಲಿಂದ ಶುದ್ದೀಕರಣಗೊಂಡು ಪೂರೈಕೆಯಾಗುವ, ಜೀವಜಲಕ್ಕೆ ತಾತ್ಕಲಿಕ ಎರಡು ತಿಂಗಳ ಬ್ರೇಕ್!
ಈಗಾಗಲೇ ಪಟ್ಟಣದ ಅನೇಕ ವಾರ್ಡುಗಳಲ್ಲಿ ನೀರಿನ ಅಭಾವ ಹೇಳತೀರದು. ಬಳಕೆಯ ನೀರೆ ತಿಂಗಳಿಗೊಮ್ಮೆ ಪೂರೈಕೆಯಾಗುತ್ತದೆ, ಕುಡಿವ ನೀರಂತು ಅಪರೂಪ. ಈಗ ಅದಕ್ಕೂ ಕೊಕ್ಕೆ ಬಿದ್ದಿದೆ. ಇದರಿಂದ ಶುದ್ದ ನೀರಿಗಾಗಿ ಸಾರ್ವಜನಿಕರು ಅಲೆಯುವಂತಾಗಿದೆ.
2 ತಾಸು ಅಷ್ಟೇ ಕಾಲುವೆ ದುರಸ್ತಿಗಳ ಪೂರ್ವದಲ್ಲಿ ಆಗಾಗ್ಗೆ ಸರಬರಾಜಾಗುತ್ತಿದ್ದ ನದಿನೀರು, ಈಗ ದಿನಕ್ಕೆ ಎರಡು ಗಂಟೆಗಳ ಕಾಲ ಪಟ್ಟಣ ಪಂಚಾಯತಿ ಬಳಿಯ ಕಿರುನೀರು ಟ್ಯಾಂಕ್ ಗೆ ಹನುಮನಹಳ್ಳಿಯಿಂದ ಪೂರೈಕೆಯಾಗುತ್ತದೆ. ಸಮಯಕ್ಕೆ ಸರಿಯಾಗಿ ಈ ವೇಳೆಯಲ್ಲಿ ನೂರಾರು ಕೊಡಗಳ ಜಮಾವಣೆಯಾಗಿರುತ್ತವೆ.
ಈ ಅವಧಿಯಲ್ಲಿ ಏನಾದರೂ ವಿದ್ಯುತ್ ಕೈ ಕೊಟ್ಟರೆ ಕತೆ ಮುಗೀತು.
ಅವಧಿ ಹೆಚ್ಚಿಸಿ ಬಸವ ಕಾಲುವೆಗಳಿಂದ ನೀರು ಪಡೆಯುವ ಸ್ಮಯೋರ್ ಕಾರ್ಖಾನೆಯವರ ಪೈಪ್ ಲೈನ್ ನಿಂದ ಪಟ್ಟಣಕ್ಕೆ ಈಗ ನೀರು ಪೂರೈಕೆಯಾಗುತ್ತಿದೆ. ಬೆಳಿಗ್ಗೆ 9 ಸಂಜೆ 6 ರವರೆಗೆ ನೀರು ಪಡೆಯಲು ಟಿ.ಬಿ.ಬೋರ್ಡು ಅವಕಾಶ ನೀಡಿದೆಯಾದರೂ, ಈ ಕಾಲಾವಕಾಶ ಸಾಕಾಗುವುದಿಲ್ಲ. ಈಗಿರುವ ಸಮಯದ ಅವಧಿಯನ್ನು ಹೆಚ್ಚಿಸಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ.

> **ಪಟ್ಟಣಕ್ಕೆ ತುಂಗಭದ್ರಾ ರಾಯಬಸವ ಕಾಲುವೆಯಿಂದ ಪೂರೈಕೆಯಾಗುತ್ತಿದ್ದು, ಕಾಲುವೆ ದುರಸ್ತಿಯಿಂದ, ಪೂರೈಕೆಯ ಸಮಯ ನಿಗಧಿಯಾಗಿದ್ದರಿಂದ ವ್ಯತ್ಯಯ ಉಂಟಾಗಿದೆ. ಈ ಕುರಿತು ಟಿ.ಬಿ.ಬೋರ್ಡಿಗೆ ಪತ್ರ ಬರೆದು ಸಮಯ ಹೆಚ್ಚಿಸಲು ಮನವಿ ಮಾಡಲಾಗಿದೆ.**
> **– ಗಾದಿಲಿಂಗನಗೌಡ ಮುಖ್ಯಾಧಿಕಾರಿ.**

> **ತಿಂಗಳುಗಟ್ಟಲೆಯಾದರೂ ನೀರುಬರುವುದಿಲ್ಲ. ಕುಡಿಯಲು ಇದ್ದ ನೀರಿಗೂ ಈಗ ಬರಬಿದ್ದಿದೆ. ಟ್ಯಾಂಕಿಗೆ ನೀರು ಬಂದಾಗ ಹಿಡಿಬೇಕು. ಫಿಲ್ಟರ್ ನೀರು ತರುವ ಶಕ್ತಿ ನಮಗಿಲ್ಲ. ಕುಡಿವ ನೀರು ಸಮರ್ಪವಾಗಿ ಪೂರೈಕೆಯಾಗಲು ಅಧಿಕಾರಿಗಳು ಕ್ರಮವಹಿಸಬೇಕು.**
> **– ಪ್ಯಾಲಿಕುಮಾರ್** 2ನೇವಾರ್ಡ್ ನಿವಾಸಿ.

## ಅಂಧರಿಗಾಗಿ ಶಾಲೆ ನಿರ್ಮಿಸುವೆ

### ವಿಕಲಚೇತನರ ಮಾಶಾಸನ ಹತ್ತು ಪಟ್ಟು ಹೆಚ್ಚಿಸಿರಿ. ಶಾಸಕ ವೈ.ಎಂ. ಸತೀಶ್ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**
ಬಳ್ಳಾರಿ ಜಿಲ್ಲೆಯಲ್ಲಿ ಅಂಧ ಮಕ್ಕಳಿಗಾಗಿ ಪ್ರತ್ಯೇಕ ಶಾಲೆ ಇಲ್ಲದ ಕಾರಣ ಸರ್ಕಾರ ಭೂಮಿ ನೀಡಿದಲ್ಲಿ ಸುಸಜ್ಜಿತವಾದ ಕಟ್ಟಡವನ್ನು ಸ್ವಂತದ ಹಣದಲ್ಲಿ ಕಟ್ಟಿಸಿ ಸರ್ಕಾರಕ್ಕೆ ನೀಡುವೆ ಎಂದು ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರು ಮನವಿ ಮಾಡಿದ್ದಾರೆ.
ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಮೇಲ್ಮನೆಯ ಪ್ರಶ್ನೋತ್ತರ ಕಲಾಪದಲ್ಲಿ, ವಿಕಲಚೇತನರ ಮಾಶಾಸನ ಹೆಚ್ಚಳದ ವಿಷಯ ಪ್ರಸ್ತಾಪಿಸಿ, ಬಳ್ಳಾರಿಯಲ್ಲಿ ಅಂಧ ಮಕ್ಕಳಿಗಾಗಿ ಪ್ರತ್ಯೇಕ ಶಾಲೆ ಇಲ್ಲ. ಸರ್ಕಾರ ನಿವೇಶನವನ್ನು ನೀಡಿದಲ್ಲಿ ಸ್ವಂತದ ಹಣದಲ್ಲಿ ಆಧುನಿಕವಾದ - ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿ ಸರ್ಕಾರಕ್ಕೆ ನೀಡುವೆ. ಸರ್ಕಾರ ಪರಿಣಿತ, ತಜ್ಞ ಮತ್ತು ಅರ್ಹ ಸಿಬ್ಬಂದಿಯನ್ನು ನೇಮಕ ಮಾಡಬೇಕು. ಅಗತ್ಯವಿದ್ದಲ್ಲಿ ಸಿಬ್ಬಂದಿಯ ನೇಮಕಾತಿಯಲ್ಲೂ ಸರ್ಕಾರಕ್ಕೆ ನೆರವಾಗುವೆ ಎಂದಾಗ, ಸದನದಲ್ಲಿದ್ದ ಎಲ್ಲಾ ಸದಸ್ಯರು ಕರತಾಡನದ ಮೂಲಕ ಶಾಸಕರ ಸೇವಾ ಮನೋಭಾವನ್ನು ಮುಕ್ತಕಂಠದಿಂದ ಪ್ರಶಂಸಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.



ವಿಕಲಚೇತನರ ದೈಹಿಕ ನ್ಯೂನ್ಯತೆಯ ಪ್ರಮಾಣ ಆಧರಿಸಿ ಸರ್ಕಾರ ಅವರಿಗೆ ಮಾಸಿಕ 600, 800 ಮತ್ತು 1000 ರೂಪಾಯಿ ಗೌರವ ಮಾಶಾಸನವನ್ನು ಪಾವತಿಸುತ್ತಿದೆ. ಈ ಮೊತ್ತದಿಂದ ದೈಹಿಕ ವಿಕಲಚೇತನರು ಇಂದಿನ ದಿನಮಾನಗಳಲ್ಲಿ ಗೌರವಯುತವಾಗಿ ಜೀವನ ನಡೆಸಲು ಸಾಧ್ಯವಿಲ್ಲ. ವಿಕಲಚೇತನ ಮಗನ ಪೋಷಕನಾಗಿ ಅಂಥಹಾ ಮಗುವಿನ ಆರೈಕೆಯಲ್ಲಿರುವ ಸವಾಲುಗಳು ನನಗೆ ಚೆನ್ನಾಗಿ ಅನುಭವಕ್ಕೆ ಬಂದಿವೆ. ನನ್ನ ಮಗನು ನನಗೇನು ಸಮಸ್ಯೆ ಆಗಿಲ್ಲ. ಆದರೆ, ಆರ್ಥಿಕ ಸಂಕಷ್ಟದಲ್ಲಿರುವ ವಿಕಲಚೇತನರ ಪೋಷಕರ ಸಮಸ್ಯೆಗಳನ್ನು ಅರ್ಥೈಸಿಕೊಂಡು ಈ ವಿಚಾರವನ್ನು ಪ್ರಸ್ತಾಪ ಮಾಡಿರುವೆ ಎಂದರು.
ಕರ್ನಾಟಕದಲ್ಲಿ ದೈಹಿಕ ವಿಕಲಚೇತನರ ಸಂಖ್ಯೆ ಕಡಿಮೆ ಇದ್ದು, ಸರ್ಕಾರ ಮಾಶಾಸನದ ಮೊತ್ತವನ್ನು ಹತ್ತುಪಟ್ಟು ಹೆಚ್ಚಿಸಿದಲ್ಲಿ ಸರ್ಕಾರಕ್ಕೆ ಅಷ್ಟೇನು ಆರ್ಥಿಕ ಹೊರೆಯಾಗುವುದಿಲ್ಲ. ಹೆಚ್ಚಿನ ಮಾಶಾಸನ ಪಾವತಿಸಿ ರಾಜ್ಯದಲ್ಲಿರುವ ವಿಕಲಚೇತನರು ಗೌರವಯುತವಾಗಿ - ಅಭಿಮಾನದಿಂದ ಜೀವನ ನಡೆಸುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಬಳ್ಳಾರಿಯಲ್ಲಿರುವ ಮೂಗ ಮತ್ತು ಕಿವುಡ ವಿದ್ಯಾರ್ಥಿಗಳ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರ ಕೊರತೆಯಿದೆ. ಶಿಕ್ಷಕರಿಲ್ಲದೇ ವಿದ್ಯಾರ್ಥಿಗಳು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸರ್ಕಾರ ಈ ಕುರಿತು ತುರ್ತಾಗಿ ಕ್ರಮಕೈಗೊಳ್ಳಬೇಕು. ಈ ಶಾಲೆಯ ಕಟ್ಟಡವೂ ಶಿಥಿಲಾವಸ್ಥೆಯಲ್ಲಿದ್ದು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಸರ್ಕಾರ ತುರ್ತಾಗಿ ಕ್ರಮಕೈಗೊಂಡು ಶಿಕ್ಷಕರ ನೇಮಕಾತಿ, ನೂತನ ಕಟ್ಟಡ ನಿರ್ಮಾಣಕ್ಕೆ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

# ಅಧಿಕಾರಿಗಳು ಗೈರು ಅಂಬಳಿ ಗ್ರಾಮಸಭೆ ರದ್ದು

### ಗ್ರಾಮ ಕಲ್ಯಾಣಕ್ಕಾಗಿ ಸರ್ಕಾರ ಆಯ್ದುಕೊಂಡ ಗ್ರಾಮ | ಸಭೆಗೆ ಗೈರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹ

**ಬಂದಾತರ ಪ್ರಕಾಶ್**
**ಹಂಪಿ ಟೈಮ್ಸ್ ಕೊಟ್ಟೂರು**
ಸ್ಥಳೀಯ ಆಡಳಿತ ಮತ್ತು ಗ್ರಾಮ ಕಲ್ಯಾಣಕ್ಕಾಗಿ ಸರ್ಕಾರ ಆಯ್ದುಕೊಂಡ ಕಾರ್ಯಕ್ರಮ ಗ್ರಾಮ ಮಟ್ಟದ 'ಗ್ರಾಮಸಭೆ" ಕೆಲ ಅಧಿಕಾರಿಗಳ ನಿರ್ಲಕ್ಷ್ಯದಿಂದ, ಮಹತ್ವಪೂರ್ಣ ಸರ್ಕಾರದ ಕಾರ್ಯಕ್ರಮಗಳು, ಉದ್ದೇಶಗಳು ಹೊಳೆಯಲ್ಲಿ ಹುಣಸೆ ಹಣ್ಣು ತೊಳದಂತಾಗುತ್ತಿವೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.
ತಾಲೂಕಿನ ಅಂಬಳಿ ಗ್ರಾಮ ಪಂಚಾಯತಿಯಲ್ಲಿ ಮಂಗಳವಾರ ಗ್ರಾಪಂ ಜನಪ್ರತಿನಿಧಿಗಳು ಮತ್ತು ಕಾರ್ಯದರ್ಶಿ ಹಾಗೂ ಪಿಡಿಒ ನೇತೃತ್ವದಲ್ಲಿ 2024-25ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕ್ರಿಯಾ ಯೋಜನೆ ಚರ್ಚಿಸುವ ವಿಷಯವಾಗಿ ಏರ್ಪಟ್ಟ ಗ್ರಾಮಸಭೆಗೆ ಇಲಾಖೆವಾರು ಅಧಿಕಾರಿಗಳ ಗೈರಾಜರಿಯಿಂದ ಗ್ರಾಮಸಭೆ ರದ್ದು.
ಅಂಬಳಿ ಗ್ರಾಪಂ ಮಾಜಿ ಉಪಾಧ್ಯಕ್ಷರ ಪತಿ, ವಿ ಬಸವರಾಜ , ಗ್ರಾ.ಪ.ಸದಸ್ಯ ಎನ್ ವಿರುಪಾಕ್ಷ ಮತ್ತು ಟಿ ಪ್ರಕಾಶ ಹಾಗೂ ತಾಲುಕು ಡಿಎಸ್‌ಎಸ್ ಸಂಘಟನಾ ಸಂಚಾಲಕರು ಹೆಚ್.ಮಾರೇಶ ಮಾತನಾಡಿ ಪ್ರಸ್ತುತ ಕೊಟ್ಟೂರು ತಾಲೂಕನ್ನು ಬರ ಪೀಡಿತ ಎಂದು ಘೋಷಿಸಿದೆ,ಇದೇ ತಾಲೂಕಿನ ನಮ್ಮ ಗ್ರಾಪಂ ವ್ಯಾಪ್ತಿಯ ಹಳ್ಳಿಗಳ ಜನ-ಜಾನುವಾರುಗಳಿಗೆ ಈ ಬರ ಪೀಡಿತವನ್ನು ಎದುರಿಸುವುದು ಪ್ರಸ್ತುತ ವರ್ಷ ದುಸಾಹಸವಾಗಿದೆ.
ಮೊದಲೆಲ್ಲ ಪ್ರಮುಖ ಇಲಾಖೆ ಅಧಿಕಾರಿಗಳು ಗೈರಾಜರಿಯಿಂದಲೇ ಗ್ರಾಮ ಸಭೆ ನಡೆದಿವೆ ಅದಕ್ಕೆ ಗ್ರಾಮದ ಯಾರೊಬ್ಬರೂ ಚಕಾರ ಎತ್ತಿಲ್ಲ ಆದರೆ ಪ್ರಸ್ತುತ ವರ್ಷ ಗ್ರಾಮ ಪಂಚಾಯತಿಗಳು ಬರಪೀಡಿತ ಸಂದಿಗ್ಧ ಪರಿಸ್ಥಿತಿಯಲ್ಲಿದ್ದು, ಇಂದು ಗ್ರಾಮಸಭೆಯಲ್ಲಿ ಚರ್ಚಿಸಲಿರುವ "ಮ.ಗಾಂ.ರಾ. ಗ್ರಾ.ಉ.ಖಾ.ಕ್ರಿಯಾಯೋಜನೆ" ಗ್ರಾಮಕ್ಕೆ ತಾಗಲಿರುವ ಬರಪೀಡಿತವನ್ನು ಸ್ವಲ್ಪ ನಿಯಂತ್ರಿಸಲು ಗ್ರಾಮಸ್ಥರಿಗೆ ಈ ಯೋಜನೆ ಮಹತ್ವದ ವರದಾನ.
ಇಂತಹ ಅತ್ಯಂತ ಅವಶ್ಯಕವಾದ ಗ್ರಾಮ ಸಭೆಗೆ ನಿರ್ಲಕ್ಷ್ಯದಿಂದ ಅಧಿಕಾರಿಗಳು ಗೈರಾಜರಾಗಿ ಗ್ರಾಮಸ್ಥರನ್ನು ಸಂಕಷ್ಟಕ್ಕೆ ಸಿಲುಕಿಸಲು ಮುಂದಾಗಿರುವುದು ಬೇಸರದ ಸಂಗತಿ ಎಂದರು.
ಸರ್ಕಾರದ ಮಹತ್ವ ಪೂರ್ಣ ಕಾರ್ಯಕ್ರಮ 'ಗ್ರಾಮ ಸಭೆ" ಕೆಲ ಅಧಿಕಾರಿಗಳ ಬೇಜವಾಬ್ದಾರಿಯಿಂದ ನೆಪಕ್ಕೆ ಮಾತ್ರ ನಡೆಯುತ್ತಿವೆ ಎಂದು ಅಸಹಾಯಕ ನುಡಿಗಳನ್ನು ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿಗಳು ಮತ್ತುಜಿಲ್ಲಾಪಂಚಾಯತಿಮುಖ್ಯಕಾರ್ಯನಿರ್ವಾಕರು ಜಿಲ್ಲೆಯ ಗ್ರಾಪಂ ಗಳಲ್ಲಿ ನಡೆಯುವ ಗ್ರಾಮಸಭೆಗಳ ಬಗ್ಗೆ ಪ್ರಸ್ತುತ ವರ್ಷ ಸ್ವಲ್ಪ ಹೆಚ್ಚಿನ ಜಾಗೃತಿ ವಹಿಸಬೇಕಿದೆ. ಅಲ್ಲದೆ ಈ ರೀತಿ ಗ್ರಾಮಸಭೆಗೆ ಗೈರಾಗುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುಬೇಕು, ಇದು ಪ್ರತಿಯೊಬ್ಬ ಅಧಿಕಾರಿಗಳಿಗೆ ಪಾಠವಾಗಬೇಕು ಎಂದು ಆಗ್ರಹಿಸಿದರು.




> ಅಂಬಳಿ ಗ್ರಾ.ಪಂಯಲ್ಲಿ 2024-25ನೇ ಸಾಲಿನ ಮ, ಗಾಂ, ರಾ, ಉ, ಖಾ ಕ್ರಿಯಾ ಯೋಜನೆ ಚರ್ಚೆ ವಿಷಯವಾಗಿ ಗ್ರಾಮಸಭೆಗೆ ಹಾಜರಾಗುವಂತೆ ಗ್ರಾ.ಪಂ ವ್ಯಾಪ್ತಿಯ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ, ಆದರೂ ಗೈರಾಗಿದ್ದಾರೆ, ಕಾರಣ ಕೊಟ್ಟಿಲ್ಲ, ನಾನು ಈ ಪಂಚಾಯತಿಗೆ ಹೊಸಬ, ಹೊಸ ಅಧಿಕಾರಿಗಳ ಫೋನ್ ನಂಬರ್ ನನ್ನಲ್ಲಿಲ್ಲ ಹಾಗಾಗಿ ಫೋನ್ ಮಾಡಿಲ್ಲ. ಗ್ರಾಮಸ್ಥರು ಸಭೆಯನ್ನು ಇಂದು ರದ್ದು ಪಡಿಸಿ. ಮುಂದೂಡಿದ್ದೇವೆ ಈ ಬಗ್ಗೆ ಇಒ ರ ಗಮನಕ್ಕೆ ತರವೆ.
> **– ದೇವೇಶ್ ಪಿಡಿಒ, ಅಂಬಳಿ ಗ್ರಾ.ಪಂ.**

> ಸರ್ಕಾರದ ಮಹತ್ವ ಪೂರ್ಣ ಕಾರ್ಯಕ್ರಮ 'ಗ್ರಾಮ ಸಭೆ" ಕೆಲ ಅಧಿಕಾರಿಗಳ ಬೇಜವಾಬ್ದಾರಿಯಿಂದ ನೆಪಕ್ಕೆ ಮಾತ್ರ ನಡೆಯುತ್ತಿವೆ, ಈ ಬಗ್ಗೆ ಮಾನ್ಯ ಕ್ಷೇತ್ರದ ಶಾಸಕರು ನೇಮಿರಾಜ್ ನಾಯ್ಕ್ ಮತ್ತು ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಮುಖ್ಯಕಾರ್ಯನಿರ್ವಾಹಕರು ಹೆಚ್ಚಿನ ಜಾಗೃತಿ ವಹಿಸಬೇಕು.
> **– ಅಂಬಳಿ ಗ್ರಾಮಸ್ಥರು.**




ನಿಮ್ಮ ಹೊಸ ಉತ್ಪನ್ನ ಬಿಡುಗಡೆಗಳು, ವಿಶೇಷ ಕೊಡುಗೆಗಳು ಮತ್ತು ಸುಧಾರಣೆಗಳ ಬಗ್ಗೆ ಹಾಗೂ ಪ್ರವೇಶ ಕುರಿತು ನಿಮ್ಮ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ: ಹಂಪಿ ಟೈಮ್ಸ್ : ಮೊ: 9448633038
Advertising can also help to create or develop a distinctive brand for your business.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA